(ಸದನವು ಪುನ�ः ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠದಲ್ಲಿದ್ದರು)

ಅಧ್ಯಕ್ಷರು: ಈಗ ಕಾರ್ಯದರ್ಶಿಯವರ ವರದಿ

2. ಕಾರ್ಯದರ್ಶಿಯವರ ವರದಿ.

ಕಾರ್ಯದರ್ಶಿ : ಮಾನ್ಯ ಅಧ್ಯಕ್ಷರೆ, ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೆ, ಸನ್ಮಾನ್ಯ ಸಭಾಧ್ಯಕ್ಷರೆ ಹಾಗೂ ಸನ್ಮಾನ್ಯ ಸದಸ್ಯರೆ,

1. ಕರ್ನಾಟಕ ವಿಧಾನ ಮಂಡಲದ ಈ ಜಂಟಿ ಅಧಿವೇಶನಕ್ಕೆ ನಿಮ್ಮೆಲ್ಲರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಕರ್ನಾಟಕದ ಜನತೆಯ ಸೇವೆ ಮಾಡಲು ನನಗೆ ಅವಕಾಶ ದೊರೆತಿರುವುದು, ನನಗೆ ಸಂದ ವಿಶೇಷ ಗೌರವವೆಂದು ನಾನು ಭಾವಿಸಿದ್ದೇನೆ. ಕಳೆದ ಒಂದು ವರ್ಷದಲ್ಲಿ ನನ್ನ ಸರ್ಕಾರವು ಕರ್ನಾಟಕದ ಜನತೆಯ ಕಲ್ಯಾಣಕ್ಕಾಗಿ ಅವಿರತವಾಗಿ ಶ್ರಮಿಸಿದೆ ಮತ್ತು ಇನ್ನೂ ಹೆಚ್ಚಿನ ಸ್ಪಂದನಶೀಲ ಆಡಳಿತವನ್ನು ನೀಡುವ ದೃಢ ನಿಶ್ಚಯದಿಂದ ಈ ವರ್ಷ ಮುನ್ನಡೆಯಲಿದ್ದೇವೆ.

ದೂರದೃಷ್ಟಿ 2020

2. ನನ್ನ ಸರ್ಕಾರ ಅಧಿಕಾರ ವಹಿಸಿಕೊಂಡ ಮೇಲೆ, ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ದಾರ್ಶನಿಕ ಸಮೂಹದ ಸಭೆ ನಡೆಯಿತು. ಅಲ್ಲಿ ಕರ್ನಾಟಕ ದೂರದೃಷ್ಟಿ ಯೋಜನೆ 2020 ರ ರೂಪುರೇಷೆಗಳನ್ನು ತಿಳಿಸಲಾಯಿತು ಹಾಗೂ ಸಮಗ್ರ ಬದಲಾವಣೆಗಾಗಿ 12 ಪ್ರಮುಖ ಕ್ಷೇತ್ರಗಳನ್ನು ಗುರುತಿಸಲಾಯಿತು. ಇದರ ಜೊತೆಗೆ ವಿವಿಧ ಬಹುಮುಖ್ಯ ಕ್ಷೇತ್ರಗಳಲ್ಲಿ ಕೆಲಸಮಾಡಲು ಸರ್ಕಾರವು 15 ಕಾರ್ಯಪಡೆಗಳನ್ನು ರಚಿಸಿತು. ಕಾರ್ಯಪಡೆಗಳು ತಮ್ಮ ವರದಿ ಸಲ್ಲಿಸಿವೆ. ಈ ಕೆಲವು ಕಾರ್ಯಪಡೆಗಳ ನೇತೃತ್ವವನ್ನು ಪ್ರೊ॥ ಸಿ.ಎನ್.ಆರ್. ರಾವ್, ಪ್ರೊ॥ ಕಸ್ತೂರಿ ರಂಗನ್, ಶ್ರೀ ಕ್ರಿಷ್ ಗೋಪಾಲಕೃಷ್ಣನ್ ಮುಂತಾದ ಮೇಧಾವಿಗಳು ವಹಿಸಿದ್ದಾರೆ. ಈ ವರದಿಗಳು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಸಮರ್ಪಕ

ಕಾರ್ಯನೀತಿಯನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಅಪಾರ ಮೌಲ್ಯವುಳ್ಳದ್ದಾಗಿವೆ. ನನ್ನ ಸರ್ಕಾರವು ಹೊಸ ಕೈಗಾರಿಕಾ ನೀತಿ, ಹೊಸ ಜವಳಿ ನೀತಿ, ಹೊಸ ಪ್ರವಾಸೋದ್ಯಮ ನೀತಿ, ಹೊಸ ಸೆಮಿ ಕಂಡಕ್ಟರ್ ನೀತಿ, ಹೊಸ ನವೀಕರಿಸಬಹುದಾದ ಇಂಧನ ನೀತಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನೀತಿ, ಗಣಿಗಾರಿಕೆ ನೀತಿ ಮುಂತಾದ ಹಲವು ನೂತನ ನೀತಿಗಳನ್ನು ಪ್ರಕಟಿಸಿದೆ.

ನೈಸರ್ಗಿಕ ವಿಕೋಪಕ್ಕೆ ಶೀಘ್ರ ಸ್ಪಂದನ

3. 2009ರ ಅಕ್ಟೋಬರ್ ಮಾಹೆಯಲ್ಲಿ ರಾಜ್ಯದಲ್ಲಿ ಹಿಂದೆಂದೂ ಕಂಡರಿಯದಂತಹ ಭಾರೀ ಪ್ರವಾಹ ಸಂಭವಿಸಿತು. ರಾಜ್ಯದ 15 ಜಿಲ್ಲೆಗಳಲ್ಲಿ ಅಪಾರ ಜೀವಹಾನಿ ಮತ್ತು ಆಸ್ತಿಪಾಸ್ತಿ ನಷ್ಟ ಉಂಟಾಯಿತು. ನಮಗೆ ತಿಳಿದಿರುವಂತೆ ರಾಜ್ಯವು ಹಿಂದೆಂದೂ ಇಂಥ ವಿಪತ್ತನ್ನು ಎದುರಿಸಿರಲಿಲ್ಲ. ಈ ಬಗ್ಗೆ ನನ್ನ ಸರ್ಕಾರ ಕೂಡಲೇ ಸ್ಪಂದಿಸಿ ಸಂಕಷ್ಟಕ್ಕೀಡಾದ ಜನರಿಗೆ ಪರಿಹಾರ ಮತ್ತು ಸಾಂತ್ವನವನ್ನು ನೀಡಲು ತ್ವರಿತ ಕ್ರಮಗಳನ್ನು ಕೈಗೊಂಡಿತು ಎಂಬುದು ತೃಪ್ತಿಕರ ವಿಷಯ.

4. ನನ್ನ ಸರ್ಕಾರ 1715 ಪರಿಹಾರ ಶಿಬಿರಗಳನ್ನು ತೆರೆದು ಸಮರೋಪಾದಿಯಲ್ಲಿ ಪರಿಹಾರ ಕ್ರಮಗಳನ್ನು ಕೈಗೊಂಡಿತು. ಪರಿಹಾರ ಶಿಬಿರಗಳಲ್ಲಿ 7.65 ಲಕ್ಷಕ್ಕೂ ಹೆಚ್ಚು ಜನರಿಗೆ ಊಟ ಮತ್ತು ತಾತ್ಕಾಲಿಕ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಸರ್ಕಾರದ ಪ್ರಾಮಾಣಿಕ ಮತ್ತು ಅವಿರತ ಪ್ರಯತ್ನಗಳಿಂದಾಗಿ, ನೆರೆಪೀಡಿತ ಪ್ರದೇಶಗಳಲ್ಲಿ ಹಸಿವು ನೀರಡಿಕೆಯಿಂದಾಗಲಿ ಮತ್ತು ರಕ್ಷಣಾ ಪ್ರಯತ್ನಗಳ ಕೊರತೆಯಿಂದಾಗಲಿ ಸಾವು ನೋವುಗಳು ಉಂಟಾಗಿಲ್ಲ. ಹಾಗೆಯೇ, ಯಾವುದೇ ಸಾಂಕ್ರಾಮಿಕ ರೋಗಗಳ ಪ್ರಕರಣಗಳೂ ಸಂಭವಿಸಿಲ್ಲ. ಸಂಕಷ್ಟಕ್ಕೀಡಾದ ಜನರ ತೊಂದರೆಯನ್ನು ಕಡಿಮೆ ಮಾಡಲು ನೀರು ಮತ್ತು ವಿದ್ಯುತ್ ಸರಬರಾಜನ್ನು ಕೂಡಲೇ ಮೊದಲಿನಂತೆಯೇ ದೊರೆಯುವಂತೆ ಮಾಡಲಾಯಿತು, ಒಟ್ಟು ಹಾನಿ ರೂ. 18,568 ಕೋಟಿ ಎಂದು ಅಂದಾಜು ಮಾಡಲಾಗಿದೆ. ರೂ.7047.34 ಕೋಟಿ ಗಳ ಆರ್ಥಿಕ ನೆರವನ್ನು ಕೋರಿ ಭಾರತ

ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಲಾಯಿತು. ಜನರ ಜೀವಕ್ಕೆ, ಜಾನುವಾರುಗಳಿಗೆ, ಬೆಳೆಗಳಿಗೆ ಆದ ಹಾನಿ ಮತ್ತು ಮನೆಗಳಿಗೆ ಆದ ನಷ್ಟಕ್ಕೆ ಪರಿಹಾರವನ್ನು ಒದಗಿಸುವುದಕ್ಕಾಗಿ ಮತ್ತು ಮೂಲ ಸೌಕರ್ಯ ನೆರವನ್ನು ಒದಗಿಸುವುದಕ್ಕಾಗಿ ಭಾರತ ಸರ್ಕಾರ ಹಣ ಬಿಡುಗಡೆ ಮಾಡುವುದನ್ನು ಕಾಯದೇ ನನ್ನ ಸರ್ಕಾರವು ರೂ. 1878 ಕೋಟಿ ಗಳನ್ನು ಬಿಡುಗಡೆ ಮಾಡಿದೆ. ಇಲ್ಲಿಯವರೆಗೆ ರೂ.1500 ಕೋಟಿಗಳಿಗಿಂತಲೂ ಹೆಚ್ಚು ಹಣವನ್ನು ಖರ್ಚು ಮಾಡಲಾಗಿದೆ. ಎಲ್ಲಾ ಬಾಧಿತ ಜಿಲ್ಲೆಗಳಲ್ಲಿ ಬೆಳೆಗಳಿಗೆ ಮತ್ತು ಮನೆಗಳಿಗೆ ಪರಿಹಾರ ಹಣದ ಪಾವತಿ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ. ಭಾರತ ಸರ್ಕಾರವು ಆ ತರುವಾಯ ರಾಷ್ಟ್ರೀಯ ವಿಕೋಪ ಮತ್ತು ಸಾದಿಲ್ವಾರು ನಿಧಿ (ಎನ್‌ಸಿಸಿಎಫ್) ಅಡಿಯಲ್ಲಿ ರೂ. 1457 ಕೋಟಿಗಳನ್ನು ಬಿಡುಗಡೆ ಮಾಡಿದೆ.

ಆಸರೆ

5. ನೆರೆ ಪರಿಹಾರ ನಿಧಿಗೆ ವಂತಿಗೆಗಳ ರೂಪದಲ್ಲಿ ಸಾರ್ವಜನಿಕರಿಂದ ಅಭೂತಪೂರ್ವ ಪ್ರತಿಕ್ರಿಯೆ ದೊರೆಯಿತು. ಸಾರ್ವಜನಿಕರಿಂದ ಮತ್ತು ಇತರರಿಂದ 341 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ನಿಧಿಯನ್ನು ಸ್ವೀಕರಿಸಲಾಯಿತು. ಪುನರ್ವಸತಿ ಕಾಲೋನಿಗಳಲ್ಲಿ ಮನೆಗಳ ನಿರ್ಮಾಣಕ್ಕಾಗಿ ಆಸರೆ ಯೋಜನೆ ಅಡಿಯಲ್ಲಿ ಹಲವಾರು ಕಾರ್ಪೋರೇಟ್ ಸಂಸ್ಥೆಗಳು ಮತ್ತು ದಾನಿ ಸಂಸ್ಥೆಗಳು ತಾವೇ ಸ್ವತಃ ಮನೆಗಳನ್ನು ನಿರ್ಮಾಣ ಮಾಡುವ ಮೂಲಕ ನೆರವು ನೀಡಲು ಮುಂದಾಗಿವೆ. 305 ಗ್ರಾಮಗಳನ್ನು ನೆರೆ ಹಾವಳಿಯಿಂದ ಪದೇಪದೇ ಹಾನಿಗೀಡಾಗುವ ಗ್ರಾಮಗಳೆಂದು ಗುರುತಿಸಲಾಗಿದೆ. 149 ಗ್ರಾಮಗಳನ್ನು ಪೂರ್ಣವಾಗಿ ಮತ್ತು ಉಳಿದವುಗಳನ್ನು ಭಾಗಶಃ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ದಾನಿಗಳು 30 ಅಡಿ x 50 ಅಡಿ ನಿವೇಶನದಲ್ಲಿ ಒಂದು ಮನೆಗೆ ತಲಾ ರೂ. 1 ಲಕ್ಷ ವೆಚ್ಚದಲ್ಲಿ 63,000 ಮನೆಗಳನ್ನು ನಿರ್ಮಿಸಲಿದ್ದಾರೆ. ಈ ಗ್ರಾಮಗಳಲ್ಲಿ ಸರ್ಕಾರವು ಭೂಮಿ, ರಸ್ತೆಗಳು, ಕುಡಿಯುವ ನೀರು,

ವಿದ್ಯುತ್ ಮತ್ತು ಒಂದು ಶಾಲಾ ಕಟ್ಟಡದಂಥ ಮೂಲಭೂತ ಸೌಕರ್ಯಗಳನ್ನು ಒದಗಿಸಲಿದೆ.

ಅಂತರರಾಜ್ಯ ಸೌಹಾರ್ದತೆಯಲ್ಲಿ ಹೊಸ ಯುಗ

6. ಕರ್ನಾಟಕ ಮತ್ತು ತಮಿಳುನಾಡುಗಳ ನಡುವೆ ಸೌಹಾರ್ದತೆ ಮತ್ತು ಸದ್ಭಾವನೆಯ ಹೊಸ ಶಕೆಯೊಂದು ಪ್ರಾರಂಭವಾಗಿದೆಯೆಂದು ತಿಳಿಸಲು ನನಗೆ ಸಂತೋಷವೆನಿಸುತ್ತಿದೆ. ಎರಡೂ ರಾಜ್ಯಗಳ ನಡುವಿನ ದಶ ದಶಮಾನಗಳ ಬಿಕ್ಕಟ್ಟಿನ ತರುವಾಯ ಮಹಾನ್ ಕವಿ ತಿರುವಳ್ಳವರ್‌ರವರ ವಿಗ್ರಹವನ್ನು ಬೆಂಗಳೂರಿನಲ್ಲಿಯೂ ಮತ್ತು ಮಹಾಕವಿ ಸರ್ವಜ್ಞರವರ ಪುತ್ಥಳಿಯನ್ನು ಚೆನ್ನೈನಲ್ಲಿಯೂ ಸ್ಥಾಪಿಸಲಾಯಿತು. ಈ ಕ್ರಮಕ್ಕೆ ಎರಡೂ ರಾಜ್ಯಗಳಲ್ಲಿ ಹಾಗೂ ದೇಶದಾದ್ಯಂತ ವ್ಯಾಪಕ ಶ್ಲಾಘನೆ ದೊರೆತಿದೆ.

ಶಾಂತಿಯುತ ಕರ್ನಾಟಕ

7. ಕಳೆದ ಒಂದು ವರ್ಷದ ಅವಧಿಯಲ್ಲಿ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯು ನಿಯಂತ್ರಣದಲ್ಲಿದೆ. 5 ವರ್ಷಗಳಲ್ಲಿ ಮೊಟ್ಟಮೊದಲ ಬಾರಿಗೆ, ಕಳೆದ ಒಂದು ವರ್ಷದಲ್ಲಿ ಪೊಲೀಸ್ ಗೋಲಿಬಾರ್‌ನಿಂದ ಸಾವು ಸಂಭವಿಸಿರುವುದಿಲ್ಲ. ಅಲ್ಲದೆ, ಕಳೆದ ವರ್ಷದ ಅವಧಿಯಲ್ಲಿ ಯಾವುದೇ ಭಯೋತ್ಪಾದಕ ಧಾಳಿ ನಡೆದಿಲ್ಲ. 2009ನೇ ವರ್ಷದಲ್ಲಿ ನಕ್ಸಲೀಯರ ನಿಯಂತ್ರಣದಲ್ಲಿ ಅಪಾರ ಸುಧಾರಣೆ ಆಗಿದೆ. ಸದರಿ ವರ್ಷದಲ್ಲಿ ನಕ್ಸಲರಿಂದ ಯಾವುದೇ ನಾಗರಿಕರು ಅಥವಾ ಪೊಲೀಸರು ಹತರಾಗಿಲ್ಲ ಮತ್ತು ನಕ್ಸಲರನ್ನೊಳಗೊಂಡ ಯಾವುದೇ ಪ್ರಮುಖ ಕಾನೂನು ಮತ್ತು ಸುವ್ಯವಸ್ಥೆ ಘಟನೆಗಳೂ ನಡೆದಿಲ್ಲ. ಕೋಮು ಶಾಂತಿ ಮತ್ತು ಸೌಹಾರ್ದತೆ ಕದಡಲು ಪ್ರಯತ್ನಿಸುವ ಶಕ್ತಿಗಳನ್ನು ನಿಗ್ರಹಿಸಲು ನನ್ನ ಸರ್ಕಾರವು ನಿಷ್ಠುರ ಕ್ರಮಗಳನ್ನು ತೆಗೆದುಕೊಂಡಿದೆ.

8. ಕಳೆದ ಲೋಕಸಭಾ ಚುನಾವಣೆಗಳಿಗೆ ಮೊದಲು ನಾಲ್ಕು ನಕ್ಸಲ್‌ಪೀಡಿತ ಜಿಲ್ಲೆಗಳಾದ ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನಕ್ಸಲರು ಮತದಾನ ಬಹಿಷ್ಕಾರಕ್ಕೆ ಕರೆ ನೀಡಿದ್ದರು. ಈ ಪ್ರದೇಶಗಳಲ್ಲಿ ಕಟ್ಟುನಿಟ್ಟಾಗಿ ಮತ್ತು ಭಾರೀ ಪ್ರಮಾಣದಲ್ಲಿ ಭದ್ರತಾ ವ್ಯವಸ್ಥೆಗಳನ್ನು ಮಾಡಲಾಗಿತ್ತು. ತತ್ಪರಿಣಾಮವಾಗಿ ಶೇಕಡಾವಾರು

ಮತದಾನ ಹೆಚ್ಚಾಗಿತ್ತು ಮತ್ತು ಮತದಾನವೂ ಶಾಂತಿಯುತವಾಗಿ ನಡೆಯಿತು. 2009ರ ಲೋಕಸಭಾ ಚುನಾವಣೆಗಳು ರಾಜ್ಯದಲ್ಲಿ ನಡೆಸಿದ ಅತ್ಯಂತ ಶಾಂತಿಯುತ ಚುನಾವಣೆಗಳಲ್ಲಿ ಒಂದೆಂದು ಇಲ್ಲಿ ಹೇಳುವುದು ಸೂಕ್ತ.

9. ಕಳೆದ ಒಂದು ವರ್ಷದಲ್ಲಿ ಪೊಲೀಸ್ ಇಲಾಖೆಯಲ್ಲಿ ಒಂದು ಹೊಸ ಗಸ್ತು ಪದ್ಧತಿ, ದೂರು ನೋಂದಣಿಗಾಗಿ ಠಾಣಾಧಿಕಾರಿ, ವೃತ್ತ ನಿರೀಕ್ಷಕರು ಮತ್ತು ಉಪ ಆರಕ್ಷಕ ಅಧೀಕ್ಷಕರ ದೂರವಾಣಿ ಸಂಖ್ಯೆಯುಳ್ಳ ಸೂಚನಾ ಫಲಕಗಳನ್ನು ಹಾಕುವುದು, ಜಿಲ್ಲಾ ಪೊಲೀಸ್ ಅಧೀಕ್ಷಕರ ಮತ್ತು ಡಿಸಿಪಿಯವರ ಪ್ರತಿಯೊಂದು ಕಚೇರಿಯಲ್ಲಿ ಒಂದು ದೂರು ಸ್ವೀಕರಣಾ ಕೇಂದ್ರ ಸ್ಥಾಪನೆ, ಸಾರ್ವಜನಿಕರು ಸಂಪರ್ಕಿಸಿ ತಮ್ಮ ಕುಂದುಕೊರತೆ ಇತ್ಯಾದಿಗಳನ್ನು ವರದಿ ಮಾಡಲು ಡಿಜಿ ಮತ್ತು ಐಜಿಪಿಯವರ ಕಚೇರಿಯಲ್ಲಿ ಅಹೋರಾತ್ರಿ ಸೇವೆ ನೀಡುವ ಒಂದು ಸುಂಕರಹಿತ ದೂರವಾಣಿ ಸಂಖ್ಯೆ ಸ್ಥಾಪನೆ ಇತ್ಯಾದಿ ಹತ್ತು ಹಲವು ನಾಗರಿಕ ಕೇಂದ್ರಿತ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಪ್ರಾದೇಶಿಕ ಅಸಮತೋಲನಗಳ ಪರಿಹಾರ

10. ರಾಜ್ಯದ ಒಟ್ಟಾರೆ ಅಭಿವೃದ್ಧಿಗೆ ಮತ್ತು ಕೆಲವು ಕ್ಷೇತ್ರಗಳಲ್ಲಿ ಪ್ರಾದೇಶಿಕ ಅಸಮತೋಲನವನ್ನು ಕಡಿಮೆ ಮಾಡಲು ಮತ್ತು ರಾಜ್ಯದ ಹಿಂದುಳಿದ ತಾಲೂಕುಗಳನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸಲು ನನ್ನ ಸರ್ಕಾರವು ಬದ್ಧವಾಗಿದೆ. ಡಾ॥ ನಂಜುಂಡಪ್ಪ ಸಮಿತಿ ವರದಿಯನ್ನು ಅನುಷ್ಠಾನಗೊಳಿಸಲು ಸರ್ಕಾರವು ವಿಶೇಷಾಭಿವೃದ್ಧಿ ಯೋಜನೆ ಅಡಿಯಲ್ಲಿ ರೂ. 2578 ಕೋಟಿಗಳನ್ನು ಹಂಚಿಕೆ ಮಾಡಿದೆ. ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸಲು ವಿಶೇಷಾಭಿವೃದ್ಧಿ ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆಗೆ ಒಂದು ಉನ್ನತ ಅಧಿಕಾರ ಸಮಿತಿಯನ್ನು ಸಹ ರಚಿಸಲಾಗಿದೆ.

ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳು

11. ನನ್ನ ಸರ್ಕಾರವು ಪ್ರಥಮ ಬಾರಿಗೆ ಪ್ರಾಯೋಗಿಕವಾಗಿ ಬಿಜಾಪುರ, ಗುಲ್ಬರ್ಗ, ಮೈಸೂರು ಮತ್ತು ಉಡುಪಿ ಜಿಲ್ಲೆಗಳಿಗೆ ಜಿಲ್ಲಾಮಟ್ಟದ

ಮಾನವ ಅಭಿವೃದ್ಧಿ ವರದಿಗಳನ್ನು ಹೊರತಂದಿದೆ. ಈ ವರದಿಗಳು ಒಂದು ವಸ್ತುನಿಷ್ಠ ವಿಧಾನದಲ್ಲಿ ಅಭಿವೃದ್ಧಿಯ ಮಟ್ಟಗುರುತುಗಳನ್ನು ನಿಶ್ಚಯಿಸಿಕೊಳ್ಳಲು ಮತ್ತು ಅಭಿವೃದ್ಧಿ ಸೂಚಕಗಳನ್ನು ಮೇಲ್ವಿಚಾರಣೆ ಮಾಡಲು ಶಕ್ತಗೊಳಿಸುತ್ತವೆ. ಇನ್ನೂ 5 ಜಿಲ್ಲೆಗಳ ವರದಿಗಳು ಮುಂದೆ ಪ್ರಕಟವಾಗಲಿವೆ ಮತ್ತು ರಾಜ್ಯವು ಹಂತ ಹಂತವಾಗಿ ಎಲ್ಲ ಜಿಲ್ಲೆಗಳ ಮಾನವ ಅಭಿವೃದ್ಧಿ ವರದಿಗಳನ್ನು ಹೊರ ತರಲು ಉದ್ದೇಶಿಸಿದೆ.

ರೈತರ ಕಲ್ಯಾಣ

12. ಸಮಾಜದ ಸಮಗ್ರ ಕ್ಷೇಮಾಭಿವೃದ್ಧಿಗೆ ರೈತರ ಅಭಿವೃದ್ಧಿ ಮತ್ತು ಕಲ್ಯಾಣವು ಅತ್ಯಾವಶ್ಯಕ. ನನ್ನ ಸರ್ಕಾರವು, ಸಮಾಜದ ಬೆನ್ನೆಲುಬಾದ ರೈತರ ಕಲ್ಯಾಣಕ್ಕೆ ಕಂಕಣಬದ್ಧವಾಗಿದೆ. ಈ ವರ್ಷ ಹವಾಮಾನ ವೈಪರೀತ್ಯದಿಂದಾಗಿ 118 ಲಕ್ಷ ಟನ್ ಆಹಾರ ಉತ್ಪಾದನಾ ಗುರಿಗೆ ಬದಲಾಗಿ 106 ಲಕ್ಷ ಟನ್ ಉತ್ಪಾದನೆ ಆಗಬಹುದೆಂದು ನಿರೀಕ್ಷಿಸಲಾಗಿದೆ. ಕಳೆದ ಬೆಳೆ ಹಂಗಾಮಿನಲ್ಲಿ ರೈತ ಸಮುದಾಯಕ್ಕೆ ಶೇ.50 ರಿಂದ 75ರವರೆಗೆ ಸಹಾಯಧನವನ್ನು ನೀಡಿ ಬಿತ್ತನೆ ಬೀಜಗಳನ್ನು ಪೂರೈಸಲಾಗಿದೆ. ರಾಸಾಯನಿಕ ಗೊಬ್ಬರಗಳು ಲಭ್ಯವಾಗುವಂತೆ ನೋಡಿಕೊಳ್ಳಲು ಅದರ ಪೂರೈಕೆಯನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡಲಾಗಿದೆ. ರಾಜ್ಯ ಸರ್ಕಾರವು ಮಾರ್ಕ್‌ಫೆಡ್‌ಗೆ ಸುಲಭ ನಿಯಮಗಳ ಮೇಲೆ ರೂ. 400 ಕೋಟಿಗಳ ಆವರ್ತಕ ನಿಧಿಯನ್ನು ಒದಗಿಸಿದೆ. ಇದನ್ನು ಬಳಸಿಕೊಂಡು, ರೂ. 950 ಕೋಟಿಗಳಿಗಿಂತಲೂ ಹೆಚ್ಚಿನ ಬೆಲೆಯ ರಾಸಾಯನಿಕ ಗೊಬ್ಬರವನ್ನು ನೀಡಲಾಗಿದ್ದು, ಇದರಿಂದಾಗಿ ರೈತರಿಗೆ ಬಹಳ ಅನುಕೂಲವಾಗಿರುತ್ತದೆ.

13. ಸಾವಯವ ಕೃಷಿಗೆ ಉತ್ತೇಜನವನ್ನು ನೀಡುವ ದೃಷ್ಟಿಯಿಂದ, ಸರ್ಕಾರವು ಪ್ರಸಕ್ತ ಸಾಲಿನಲ್ಲಿ ರೂ. 100 ಕೋಟಿಗಳ ಬಜೆಟ್ ಬೆಂಬಲದೊಂದಿಗೆ ಒಂದು ಸಾವಯವ ಕೃಷಿ ಮಿಷನ್ ಅನ್ನು ರಚಿಸಿರುತ್ತದೆ. ಪ್ರಾರಂಭದಲ್ಲಿ, 52,000 ರೈತರು ಪ್ರತಿಯೊಬ್ಬರೂ ರೂ. 250/– ಗಳನ್ನು ಸದಸ್ಯತ್ವ ಶುಲ್ಕವನ್ನಾಗಿ ಸ್ವಯಂಪ್ರೇರಿತರಾಗಿ ನೀಡಿ, ಸದಸ್ಯರಾಗಿ ನೋಂದಾಯಿಸಿಕೊಂಡಿದ್ದಾರೆ. ಮೊದಲಿಗೆ, ಈ ಕಾರ್ಯಕ್ರಮದಡಿ 71,000 ಹೆಕ್ಟೇರ್‌ಗಳಿಗಿಂತ ಹೆಚ್ಚು ಭೂಮಿಯನ್ನು

ತರಲಾಗಿದೆ. ಇದರಿಂದಾಗಿ ರಾಸಾಯನಿಕ ಗೊಬ್ಬರದ ಬಳಕೆಯು ಗಣನೀಯವಾಗಿ ಕಡಿಮೆಯಾಗಿರುತ್ತದೆ.

14. ಖುಷ್ಕಿ ಜಮೀನಿನ ಪ್ರದೇಶಗಳಲ್ಲಿ ಬೆಳೆ ಇಳುವರಿ ಪ್ರಮಾಣಗಳನ್ನು ಹೆಚ್ಚಿಸಲು, ಸರ್ಕಾರವು ಭೂಚೇತನ ಕಾರ್ಯಕ್ರಮವನ್ನು ಪ್ರಾರಂಭಿಸಿರುತ್ತದೆ. ಈ ಕಾರ್ಯಕ್ರಮದಲ್ಲಿ ಇಕ್ರಿಸ್ಯಾಟ್ ತಂತ್ರಜ್ಞಾನ, ಸ್ವಸ್ಥಭೂಸಾರ ಕಾರ್ಡುಗಳು, ಸೂಕ್ಷ್ಮ ಪೋಷಕಾಂಶಗಳು ಹಾಗೂ ಸಕಾಲದಲ್ಲಿ ಹೂಡುವಳಿಗಳ ಪೂರೈಕೆಯು ಸಹ ಒಳಗೊಂಡಿರುತ್ತದೆ. ಈವರೆಗೆ, ಈ ಕಾರ್ಯಕ್ರಮದಡಿ 6 ಜಿಲ್ಲೆಗಳ 32 ತಾಲ್ಲೂಕುಗಳಾದ್ಯಂತ 2.84 ಲಕ್ಷ ಹೆಕ್ಟೇರ್ ಜಮೀನು ಒಳಪಟ್ಟಿರುತ್ತವೆ. ಈ ಕಾರ್ಯಕ್ರಮವು ತುಂಬಾ ಯಶಸ್ವಿಯಾಗಿದ್ದು ಶೇ.32 ರಿಂದ 40ರವರೆಗೆ ಪ್ರಗತಿದಾಯಕ ಇಳುವರಿಯು ದಾಖಲಾಗಿದೆ. ಈ ಕಾರ್ಯಕ್ರಮವನ್ನು ರಾಜ್ಯದಾದ್ಯಂತ ಹಂತಹಂತವಾಗಿ ವಿಸ್ತರಿಸಲಾಗುವುದು.

15. ಕೃಷಿ, ಪಶುಸಂಗೋಪನೆ, ತೋಟಗಾರಿಕೆ, ರೇಷ್ಮೆ ಮತ್ತು ತತ್ಸಂಬಂಧಿತ ಚಟುವಟಿಕೆಗಳ ನಡುವೆ ಉತ್ತಮ ಸಮನ್ವಯವನ್ನು ಸಾಧಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರವು ಕರ್ನಾಟಕ ಕೃಷಿ ಮಿಷನ್ ಅನ್ನು ರಚಿಸಿದೆ. ರಾಜ್ಯದ ವಿವಿಧ ಮಾರುಕಟ್ಟೆಗಳಲ್ಲಿ ಪ್ರತಿದಿನದ ಕೃಷಿ ಉತ್ಪನ್ನಗಳ ಆಗಮನ ಮತ್ತು ಅವುಗಳ ಚಾಲ್ತಿ ಧಾರಣೆಗಳ ಬಗ್ಗೆ ಮಾಹಿತಿಯನ್ನು ಒದಗಿಸುವುದಕ್ಕಾಗಿ "ಕೃಷಿ ಮಾರಾಟ ವಾಹಿನಿ" ಎಂಬ ವೆಬ್‌ಸೈಟ್ ಅನ್ನು ಪ್ರಾರಂಭಿಸಲಾಗಿದೆ.

16. ರಾಜ್ಯದಲ್ಲಿ ತೋಟಗಾರಿಕೆ ಚಟುವಟಿಕೆಗಳಿಗೆ ಉತ್ತೇಜನವನ್ನು ನೀಡಲಾಗಿದ್ದು, ರಾಷ್ಟ್ರೀಯ ತೋಟಗಾರಿಕಾ ಮಿಷನ್ ಅಡಿಯಲ್ಲಿನ ಚಟುವಟಿಕೆಗಳಿಗೆ ಉತ್ತಮ ಪ್ರತಿಕ್ರಿಯೆ ಕಂಡುಬಂದಿದೆ. ಲಭ್ಯವಿರುವ ನೀರನ್ನು ಉತ್ತಮವಾಗಿ ಬಳಸಿಕೊಳ್ಳುವ ಉದ್ದೇಶದಿಂದ ಸೂಕ್ಷ್ಮ ನೀರಾವರಿ ಯೋಜನೆ ಕಡೆ ಗಮನವನ್ನು ಹರಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ. 127 ಕೋಟಿಗಳನ್ನು ಒದಗಿಸಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ. 2008ರಲ್ಲಿ ಅಸ್ತಿತ್ವಕ್ಕೆ ಬಂದಿರುವ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ,

ಬಾಗಲಕೋಟೆ, ಈಗ ತೋಟಗಾರಿಕೆ ಸಂಬಂಧಿತ ವಿವಿಧ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ.

17. ಸಹಕಾರಿ ವಲಯದಲ್ಲಿ ಹಾಲಿನ ಉತ್ಪಾದನೆಯನ್ನು ಹೆಚ್ಚಿಸಲು ರೈತರಿಗೆ ಪ್ರೋತ್ಸಾಹ ದರವಾಗಿ ಪ್ರತಿ ಲೀಟರ್‌ಗೆ 2 ರೂ. ಗಳ ಸಹಾಯಧನ ನೀಡಿಕೆಯನ್ನು ಮುಂದುವರಿಸಲಾಗಿದೆ. ಈ ಉದ್ದೇಶಕ್ಕಾಗಿ ರೂ.200 ಕೋಟಿ ಗಳ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ಇದರಿಂದಾಗಿ ಕರ್ನಾಟಕವು ದೇಶದಲ್ಲಿಯೇ ಸಹಕಾರಿ ಕ್ಷೇತ್ರದಲ್ಲಿ ಹಾಲಿನ ಉತ್ಪಾದನೆಯಲ್ಲಿ ಎರಡನೆಯ ದೊಡ್ಡ ರಾಜ್ಯವಾಗಿದೆ ಹಾಗೂ ಪ್ರತಿದಿನ 4.5 ಲಕ್ಷ ಲೀಟರ್‌ಗಳಷ್ಟು ಹೆಚ್ಚು ಹಾಲಿನ ಉತ್ಪಾದನೆ ಆಗುತ್ತಿದೆ. ಉತ್ತರ ಕರ್ನಾಟಕದಲ್ಲಿ ಹಾಲಿನ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಡೈರಿ ಚಟುವಟಿಕೆಗಳನ್ನು ಬಲಗೊಳಿಸಲು, 122 ಹಾಲಿನ ಸಹಕಾರಿ ಸಂಘಗಳನ್ನು ಹೊಸದಾಗಿ ಸ್ಥಾಪಿಸಲಾಗಿದೆ.

18. ದ್ರಾಕ್ಷಿ ಬೆಳೆಗಾರರಿಗೆ ಸರಿಯಾದ ಪ್ರೋತ್ಸಾಹ ಮತ್ತು ಸಂಭಾವನೆಯನ್ನು ನೀಡಲು ಸರ್ಕಾರವು ರಾಜ್ಯದ ದ್ರಾಕ್ಷಾರಸ ಕಾರ್ಯನೀತಿಯನ್ನು ಜಾರಿಗೆ ತಂದಿದೆ. ಇದೂ ಅಲ್ಲದೆ, ತೋಟಗಾರಿಕೆ ಕ್ಷೇತ್ರ (ಫಾರಂ)ಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು, ಇವುಗಳಲ್ಲಿ 19 ಕ್ಷೇತ್ರ (ಫಾರಂ)ಗಳನ್ನು ಇತರ ಪಾಲುದಾರರ ಸಹಯೋಗದಲ್ಲಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ.

19. ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮ ಗುಣಮಟ್ಟದ ಅಕ್ಕಿಯನ್ನು ಒದಗಿಸಲು ಮತ್ತು ಮುಕ್ತ ಮಾರುಕಟ್ಟೆಯಲ್ಲಿ ಹಣದುಬ್ಬರದ ಪ್ರವೃತ್ತಿಯನ್ನು ನಿಯಂತ್ರಿಸಲು "ಅಕ್ಕಿ ಸಂತೆ"ಗಳನ್ನು ವ್ಯವಸ್ಥೆಗೊಳಿಸಲಾಗಿದೆ. ನನ್ನ ಸರ್ಕಾರವು, ಸಾರ್ವಜನಿಕ ವಿತರಣೆ ವ್ಯವಸ್ಥೆಯಡಿ ಅವಶ್ಯಕ ಉಪಯುಕ್ತ ವಸ್ತುಗಳ ಪೂರೈಕೆಗಾಗಿ ಸಮುದಾಯ ವಿತರಣೆಯ ವ್ಯವಸ್ಥೆಯನ್ನು ದೋಷರಹಿತವನ್ನಾಗಿಸಲು ಮಾರಾಟಮಳಿಗೆಗಳಲ್ಲಿ ಧ್ವನಿ ಇಂಟರ್‌ಫೇಸ್ ಉಳ್ಳ ಬಯೋಮೆಟ್ರಿಕ್ ಸಾಧನಗಳ ಪೂರೈಕೆ ಯೋಜನೆಯನ್ನು ಮುಂದುವರಿಸಲು ಉದ್ದೇಶಿಸಿದೆ.

ಸುಧಾರಿತ ನೀರಾವರಿ ನಿರ್ವಹಣೆ

20. ನಿಧಾನಗತಿಯಲ್ಲಿ ನಡೆಯುತ್ತಿರುವ 14 ಯೋಜನೆಗಳನ್ನು ಬೇಗನೆ ಪೂರ್ಣಗೊಳಿಸಿ ಕೃಷ್ಣ ಮತ್ತು ಕಾವೇರಿ ನದಿ ನೀರಿನ ಉತ್ತಮ ಬಳಕೆಗೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಬೃಹತ್ ಮತ್ತು ಸಣ್ಣ ನೀರಾವರಿ ಯೋಜನೆಗಳಡಿ 1.2 ಲಕ್ಷ ಹೆಕ್ಟೇರ್‌ಗಳ ಹೆಚ್ಚುವರಿ ನೀರಾವರಿ ಸಾಮರ್ಥ್ಯವನ್ನು ಸೃಜಿಸಲಾಗಿದೆ. ಹೆಚ್ಚಿನ ಪ್ರದೇಶದಲ್ಲಿ ಭೂನಾಲೆಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗಿದೆ. ಇದರ ಜೊತೆಗೆ, 2 ಲಕ್ಷ ಹೆಕ್ಟೇರ್‌ಗಳ ಚೌಳು ನೆಲ ಮತ್ತು ಜೌಗು ಪ್ರದೇಶಗಳನ್ನು ಸಾಗುವಳಿಯೋಗ್ಯ ಮಾಡುವ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ತುಂಗಭದ್ರ, ಭದ್ರಾ ಹಾಗೂ ಕಬಿನಿ ನಾಲೆಗಳ ಆಧುನೀಕರಣದಿಂದಾಗಿ 11 ಟಿಎಂಸಿ ಅಷ್ಟು ನೀರು ಉಳಿತಾಯವಾಗಿದ್ದು, ಇದರಿಂದ 20,000 ಹೆಕ್ಟೇರ್‌ಗಳಿಗೆ ಪ್ರಯೋಜನವಾಗುತ್ತದೆ. ನೀರಿನ ಸಂಗ್ರಹಣೆ ಹೆಚ್ಚಳಕ್ಕೆ ಆದ್ಯತೆ ನೀಡುವ ಬದಲಾಗಿ ಜಲ ನಿರ್ವಹಣೆ ಮತ್ತು ಸಮಗ್ರ ಜಲಸಂಪನ್ಮೂಲ ನಿರ್ವಹಣೆ ಅಭಿವೃದ್ಧಿಗೆ ಆದ್ಯತೆಯನ್ನು ನೀಡಲಾಗುತ್ತಿದೆ. ನೀರಿನ ಬಳಕೆಯನ್ನು ಹೆಚ್ಚು ಉಪಯುಕ್ತವಾಗಿಸಲು ನೀರು ಬಳಕೆದಾರರ ಸಹಕಾರಿ ಸಂಘಗಳನ್ನು ಬಲಪಡಿಸಲಾಗಿದೆ.

21. ಉತ್ತರ ಕರ್ನಾಟಕದ ಬರಪೀಡಿತ ಪ್ರದೇಶಗಳಲ್ಲಿ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಒತ್ತನ್ನು ನೀಡುವ ದೃಷ್ಟಿಯಿಂದ, ತ್ವರಿತ ನೀರಾವರಿ ಪ್ರಯೋಜನ ಕಾರ್ಯಕ್ರಮದಡಿ (ಎಐಬಿಸಿ) 8 ಯೋಜನೆಗಳ ಸಂಬಂಧದಲ್ಲಿ ಯೋಜನಾ ಆಯೋಗದಿಂದ ಬಂಡವಾಳ ಹೂಡಿಕೆ ಅನುಮತಿಯನ್ನು ಪಡೆದುಕೊಳ್ಳಲಾಗಿದೆ. ಈ ಹಣಕಾಸು ವರ್ಷವು ಮುಕ್ತಾಯವಾಗುವುದರೊಳಗೆ ತ್ವರಿತ ನೀರಾವರಿ ಪ್ರಯೋಜನ ಕಾರ್ಯಕ್ರಮದಡಿ (ಎಐಬಿಪಿ) ಭಾರತ ಸರ್ಕಾರ ರೂ. 776 ಕೋಟಿಗಳನ್ನು ಬಿಡುಗಡೆ ಮಾಡಬಹುದೆಂದು ನಾವು ನಿರೀಕ್ಷಿಸಿದ್ದೇವೆ.

ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಮತ್ತು ವಿತರಣೆಯನ್ನು ಹೆಚ್ಚಿಸುವ ದಿಸೆಯಲ್ಲಿ

22. ನನ್ನ ಸರ್ಕಾರವು, ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ ವಿದ್ಯುತ್ ಯೋಜನೆಗಳ ಅಭಿವೃದ್ಧಿಗಾಗಿ ಅನೇಕ

ಉಪಕ್ರಮಗಳನ್ನು ಕೈಗೊಂಡಿದೆ. ಬಿಜಾಪುರ ಜಿಲ್ಲೆಯ ಕೊಡ್ಗಿಯಲ್ಲಿ ರಾಷ್ಟ್ರೀಯ ಶಾಖೋತ್ಪನ್ನ ವಿದ್ಯುತ್ ನಿಗಮವು (ಎನ್‌ಟಿಪಿಸಿ) ಸ್ಥಾಪಿಸುವ 4000 ಮೆಗಾವ್ಯಾಟ್ ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ಯೋಜನೆಗಾಗಿ ಭೂಸ್ವಾಧೀನವನ್ನು ಆರಂಭಿಸಲಾಗಿದೆ. ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಬಿ.ಹೆಚ್.ಇ.ಎಲ್.ನ ಸಹಯೋಗದಲ್ಲಿ ಯರಮರಸ್‌ನಲ್ಲಿ 1600 ಮೆಗಾವ್ಯಾಟ್ ಸಾಮರ್ಥ್ಯದ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಿದೆ ಮತ್ತು ಯಡ್ಲಾಪುರದಲ್ಲಿ 800 ಮೆಗಾವ್ಯಾಟ್ ಸಾಮರ್ಥ್ಯದ ಕಾಮಗಾರಿಯನ್ನು ಸಧ್ಯದಲ್ಲೇ ಪ್ರಾರಂಭಿಸಲಿದೆ. ಈ ಎರಡೂ ಯೋಜನೆಗಳಿಗೆ ಪರಿಸರ ಇಲಾಖೆಯ ಅನುಮೋದನೆ ದೊರೆತಿವೆ. 2 x 600 ಮೆ.ವ್ಯಾ. ಉಡುಪಿ ವಿದ್ಯುತ್ ಯೋಜನೆ ಈ ವರ್ಷದ ಮಧ್ಯಭಾಗದಲ್ಲಿ ಆರಂಭವಾಗುವ ನಿರೀಕ್ಷೆ ಇದೆ.

23. ಕರ್ನಾಟಕದ ಇಂಧನ ವಲಯದ ಮೇಲೆ ಮಹತ್ವದ ಪರಿಣಾಮವನ್ನುಂಟು ಮಾಡುವ ಬೃಹತ್ ಮೂಲ ಸೌಕರ್ಯ ಯೋಜನೆಯೆಂದರೆ "ಗ್ಯಾಸ್ ಗ್ರಿಡ್". ಇದನ್ನು ಭಾರತದ ಅನಿಲ ಪ್ರಾಧಿಕಾರದವರು (ಜಿಎಐಎಲ್) ಅಭಿವೃದ್ಧಿಪಡಿಸುತ್ತಿದ್ದು, ದಾಭೋಲ್‌ನಿಂದ ಬೆಂಗಳೂರಿನವರೆಗೆ 740 ಕಿ.ಮೀ.ಗಳ ದೂರವನ್ನು ಒಳಗೊಂಡಂತೆ ಅಭಿವೃದ್ಧಿಪಡಿಸಲಾಗುತ್ತಿದೆ. ಗೇಲ್ ಸಂಸ್ಥೆಯು 2012ರ ವೇಳೆಗೆ ಈ ಗ್ರಿಡ್ ಸ್ಥಾಪನೆಯಾಗುತ್ತದೆ ಎಂದು ಹೇಳಿರುತ್ತದೆ. ನಾವು ಬಿಡದಿ ಬಳಿ ಕ.ವಿ.ವಿ.ನಿ.ದಿಂದ ಒಂದು ಯೋಜನೆ ಮತ್ತು ಖಾಸಗಿ ವಲಯದ 4 ಅನಿಲ ಆಧಾರಿತ ವಿದ್ಯುತ್ ಯೋಜನೆಗಳನ್ನು ಕೈಗೊಳ್ಳುವ ಮೂಲಕ 7,900 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ನಿರೀಕ್ಷೆ ಹೊಂದಿದ್ದೇವೆ.

24. ನನ್ನ ಸರ್ಕಾರವು ವಿದ್ಯುತ್ ವಲಯದಲ್ಲಿ ವಿತರಣೆಯನ್ನು ಸುಧಾರಿಸಲು ಅನೇಕ ಮಹತ್ವದ ಯೋಜನೆಗಳನ್ನು ಆರಂಭಿಸಿರುತ್ತದೆ. ಆಯ್ದ 100 ಪಟ್ಟಣಗಳಲ್ಲಿ ಪುನರ್‌ರಚಿತ ವೇಗವರ್ಧಿತ ವಿದ್ಯುತ್ ಅಭಿವೃದ್ಧಿ ಸುಧಾರಣಾ ಕಾರ್ಯಕ್ರಮಗಳು, ವಿತರಣಾ ವ್ಯವಸ್ಥೆಗಳನ್ನು ಬಲಪಡಿಸುತ್ತವೆ. ಎಲ್ಲ ಕೃಷಿಯೇತರ ಗ್ರಾಮೀಣ ಗ್ರಾಹಕರಿಗೆ 24

ಗಂಟೆಗಳ ವಿದ್ಯುತ್ ಸರಬರಾಜು ನೀಡುವ ನಿರಂತರ ಜ್ಯೋತಿಯ ಅನುಷ್ಠಾನ ಮಾಡಿ ರೈತರಿಗೆ ಗುಣಮಟ್ಟದ ವಿದ್ಯುತ್ತನ್ನು ನೀಡಲಾಗುವುದು. ಜಪಾನ್ ಅಂತರ್‌ರಾಷ್ಟ್ರೀಯ ಸಹಕಾರ ಏಜೆನ್ಸಿಯ ನೆರವಿನ ವಿತರಣಾ ಆಟೋಮೇಷನ್ ವ್ಯವಸ್ಥೆಯು ಬೆಂಗಳೂರು ನಗರದಲ್ಲಿ ವಿದ್ಯುತ್ ಸರಬರಾಜು ಅಡಚಣೆಯನ್ನು ಕಡಿಮೆಗೊಳಿಸುತ್ತದೆ ಮತ್ತು ತನ್ನ ವಿಶ್ವಾಸಾರ್ಹತೆಯನ್ನು ಹೆಚ್ಚಿಸುತ್ತದೆ. ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುದ್ಧೀಕರಣ ಯೋಜನೆಯು 2012ರ ವೇಳೆಗೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಉಚಿತ ಮೂಲ ಸೌಕರ್ಯದೊಂದಿಗೆ ಎಲ್ಲಾ ಗ್ರಾಮಾಂತರ ಕುಟುಂಬಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತದೆ. ಈ ಯೋಜನೆಗಳ ಅನುಷ್ಠಾನದ ಫಲಿತಾಂಶಗಳು ಬಹಳ ಉತ್ತೇಜನಕಾರಿಯಾಗಿರುತ್ತವೆ.

25. ನನ್ನ ಸರ್ಕಾರವು, ಬೇಸಿಗೆ ತಿಂಗಳುಗಳಲ್ಲಿ ತಕ್ಷಣದ ಬೇಡಿಕೆ–ಸರಬರಾಜು ನಡುವಿನ ಅಂತರವನ್ನು ಕೂಡಲೇ ನೀಗಿಸಲು ಮತ್ತು ಸಾಕಷ್ಟು ವಿದ್ಯುತ್ ಸರಬರಾಜನ್ನು ಒದಗಿಸಲು ಇತರ ಏಜೆನ್ಸಿಗಳಿಂದ ವಿದ್ಯುತ್ ಖರೀದಿಸಲು ಸರ್ವಪ್ರಯತ್ನಗಳನ್ನು ಮಾಡುತ್ತಿದೆ.

ಕುಂದುಕೊರತೆ ನಿವಾರಣೆ

26. ಹೋಬಳಿ ಮಟ್ಟದಲ್ಲಿ ನಡೆಸುತ್ತಿರುವ ಜನಸ್ಪಂದನ ಕಾರ್ಯಕ್ರಮವು ತುಂಬಾ ಜನಪ್ರಿಯವಾಗಿದೆ. ಹೋಬಳಿ/ ಗ್ರಾಮಮಟ್ಟದ ಜನಸ್ಪಂದನ ಸಭೆಗಳಲ್ಲಿ ಕುಂದುಕೊರತೆಗಳನ್ನು ಪರಿಹರಿಸುತ್ತಿರುವ ಕಾರಣದಿಂದಾಗಿ, ತಮ್ಮ ಕುಂದುಕೊರತೆಗಳ ನಿವಾರಣೆಗಾಗಿ ರಾಜ್ಯ/ ಜಿಲ್ಲೆ ಮತ್ತು ತಾಲೂಕು ಕೇಂದ್ರಗಳಲ್ಲಿರುವ ಅಧಿಕಾರಿಗಳನ್ನು ಕಾಣಲು ಬರುವ ಜನರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ.ಈ ಕಾರ್ಯಕ್ರಮವು ಪ್ರಾರಂಭವಾದಂದಿನಿಂದ, ಸುಮಾರು 8.96 ಲಕ್ಷ ಕುಂದುಕೊರತೆ ಬಗ್ಗೆ ದೂರುಗಳನ್ನು ಸ್ವೀಕರಿಸಲಾಗಿದ್ದು, ಅವುಗಳ ಬಗ್ಗೆ ಕ್ರಮವಹಿಸಲಾಗಿದೆ. ಕುಂದುಕೊರತೆಗಳ ಬಾಕಿ ಅರ್ಜಿಗಳನ್ನು ವಿಲೆ ಮಾಡುತ್ತಿರುವ ಕಾರಣದಿಂದಾಗಿ ಕುಂದುಕೊರತೆಗಳ ದೂರುಗಳ ಸಂಖ್ಯೆ ಕಡಿಮೆ ಆಗುತ್ತಿದೆ.

ಸರ್ವರಿಗೂ ಆರೋಗ್ಯ

27. ರಾಜ್ಯದಲ್ಲಿ ಉತ್ತಮ ಆರೋಗ್ಯ ಸೇವೆ ಒದಗಿಸುವುದು ನನ್ನ ಸರ್ಕಾರದ ಆದ್ಯತೆಗಳಲ್ಲಿ ಒಂದು. "ಸರ್ವರಿಗೂ ಆರೋಗ್ಯ" ಎಂಬುದು ಈ ಇಲಾಖೆಯ ಧ್ಯೇಯ. ರಾಜ್ಯದ ಜನತೆಗೆ ಅದರಲ್ಲೂ ಬಡ ಜನತೆಗೆ ಉತ್ತಮ ಆರೋಗ್ಯ ಸೇವೆಯನ್ನು ಒದಗಿಸುವ ನಿಟ್ಟಿನಲ್ಲಿ ಅನೇಕ ಸಕ್ರಿಯ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸಲಾಗುತ್ತಿದೆ.

28. "ಆರೋಗ್ಯ ಕವಚ" ಯೋಜನೆಯಡಿಯಲ್ಲಿ ವೈದ್ಯಕೀಯ, ಪೊಲೀಸ್ ಮತ್ತು ಅಗ್ನಿಶಾಮಕ ತುರ್ತು ಸಂದರ್ಭಗಳಲ್ಲಿ ಆ್ಯಂಬುಲೆನ್ಸ್ ಸೇವೆಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ. ಈಗ 409 ಆ್ಯಂಬುಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಹಲವಾರು ಜೀವಗಳನ್ನು ಉಳಿಸಿವೆ. ಫೆಬ್ರವರಿ 2010ರ ಅಂತ್ಯಕ್ಕೆ ಒಟ್ಟು 517 ಆಂಬ್ಯುಲೆನ್ಸ್‌ಗಳು ಕಾರ್ಯನಿರತವಾಗುವ ಸಂಭವವಿದೆ.

29. ನನ್ನ ಸರ್ಕಾರವು "ವಾಜಪೇಯಿ ಆರೋಗ್ಯ ಶ್ರೀ ಯೋಜನೆ" ಯನ್ನು ಪ್ರಾರಂಭಿಸಿದೆ. ಮೊದಲ ಹಂತವಾಗಿ, 5 ಜಿಲ್ಲೆಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ 14.5 ಲಕ್ಷ ಕುಟುಂಬಗಳನ್ನು ಈ ಯೋಜನೆಯಡಿಯಲ್ಲಿ ಸೇರಿಸಲಾಗಿದೆ. ಈ ಯೋಜನೆಯಡಿಯಲ್ಲಿ, 402 ವಿವಿಧ ಬಗೆಯ ಚಿಕಿತ್ಸಾ ವಿಧಾನಗಳು ಒಳಗೊಂಡಿದ್ದು, ಪ್ರತಿವರ್ಷ ಕುಟುಂಬವೊಂದಕ್ಕೆ ರೂ.2 ಲಕ್ಷಗಳವರೆಗಿನ ಕ್ಲೇಮುಗಳು ಒಳಗೊಂಡಿರುತ್ತವೆ. ಈ ಯೋಜನೆಯನ್ನು ರಾಜ್ಯದಾದ್ಯಂತ ಹಂತಹಂತವಾಗಿ ವಿಸ್ತರಿಸಲು ಉದ್ದೇಶಿಸಲಾಗಿದೆ.

30. ಶಿಶು ಮರಣ ಪ್ರಮಾಣವನ್ನು ಮತ್ತು ತಾಯಂದಿರ ಮರಣ ಪ್ರಮಾಣವನ್ನು ಕಡಿಮೆಮಾಡುವ ದೃಷ್ಟಿಯಿಂದ ಮತ್ತು ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಳ್ಳುವುದನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ 974 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 24x7 ಸೇವೆಗಳನ್ನು ಪ್ರಾರಂಭಿಸಲಾಗಿದೆ ಮತ್ತು ಅವುಗಳಿಗೆ ಅಗತ್ಯ ವೈದ್ಯರು ಮತ್ತು ಸ್ಟಾಫ್‌ನರ್ಸ್‌ಗಳನ್ನು ಹಾಗೂ ಹೆಚ್ಚುವರಿ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗಿದೆ.

31. ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮದಡಿಯಲ್ಲಿ ಗುರುತರ ವೈದ್ಯಕೀಯ ಸಮಸ್ಯೆಗಳುಳ್ಳ ಮಕ್ಕಳಿಗೆ ಉಚಿತ ವೈದ್ಯಕೀಯ ಸೇವೆಯನ್ನು ಒದಗಿಸಲಾಗುತ್ತಿದೆ.

32. ಈ ಹಲವಾರು ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನದಿಂದ ಬಹುಮುಖ್ಯ ಆರೋಗ್ಯ ಸೂಚ್ಯಂಕಗಳಲ್ಲಿ ಗಮನಾರ್ಹ ಸುಧಾರಣೆ ಆಗಿದೆ. ಶಿಶು ಮರಣ ಪ್ರಮಾಣ 49 ರಿಂದ 45ಕ್ಕೆ ಇಳಿದಿದೆ. ತಾಯಂದಿರ ಮರಣದ ಪ್ರಮಾಣ 266 ರಿಂದ 213ಕ್ಕೆ ಇಳಿದಿದೆ ಮತ್ತು ಆಸ್ಪತ್ರೆಗಳಲ್ಲಿ ಹೆರಿಗೆ ಪ್ರಮಾಣ ಶೇ. 60 ರಿಂದ ಶೇ. 80ಕ್ಕೆ ಏರಿದೆ.

ವ್ಯಾಪಕ ಅಭಿವೃದ್ಧಿ

33. ವ್ಯಾಪಕ ಅಭಿವೃದ್ಧಿಗೆ ವಿಶೇಷ ಗಮನ ನೀಡಿರುವ ನನ್ನ ಸರ್ಕಾರವು, ಕಡುಬಡವರ ಕಷ್ಟಕಾರ್ಪಣ್ಯಗಳ ನಿವಾರಣೆಯ ತನ್ನ ದೃಢ ನಿಶ್ಚಯದಿಂದ ಸಾಮಾಜಿಕ ಭದ್ರತೆಯನ್ನು ವಿಸ್ತರಿಸುವ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತನ್ನು ನೀಡಿದೆ. ವಿವಿಧ ಯೋಜನೆಗಳ ಅಡಿಯಲ್ಲಿ 42.56 ಲಕ್ಷ ಫಲಾನುಭವಿಗಳಿಗೆ ಈ ಮುಂದಿನಂತೆ ನೆರವನ್ನು ನೀಡಲಾಗುತ್ತಿದೆ: ವೃದ್ಧಾಪ್ಯ ವೇತನ ಯೋಜನೆ (8.34 ಲಕ್ಷ), ಸಂಧ್ಯಾ ಸುರಕ್ಷ ಯೋಜನೆ (10.35ಲಕ್ಷ) ವಿಧವಾ ಪಿಂಚಣಿ ಯೋಜನೆ (10.12ಲಕ್ಷ) ಅಂಗವಿಕಲರ ಯೋಜನೆ (6.33 ಲಕ್ಷ) ಮತ್ತು ಭಾಗ್ಯಲಕ್ಷ್ಮಿ ಯೋಜನೆ (7.42 ಲಕ್ಷ)

34. ಪೂರಕ ಪೌಷ್ಟಿಕಾಹಾರ ಕಾರ್ಯಕ್ರಮದ ಅಡಿಯಲ್ಲಿ (ಪಿಸಿಡಿಎಸ್) ಅಪೌಷ್ಟಿಕತೆ, ರಕ್ತಹೀನತೆ ಮುಂತಾದ ಸಮಸ್ಯೆಗಳ ನಿವಾರಣೆಗಾಗಿ 43 ಲಕ್ಷ ಮಕ್ಕಳು, ಗರ್ಭಿಣಿ ಸ್ತ್ರೀಯರು ಮತ್ತು ಹಾಲುಣಿಸುವ ತಾಯಂದಿರು ಪ್ರಯೋಜನ ಪಡೆಯುತ್ತಿದ್ದಾರೆ.

35. ರಾಜ್ಯದ ವಿವಿಧ ಭಾಗಗಳಲ್ಲಿ ಹೆಚ್ಚುವರಿಯಾಗಿ 16 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗುತ್ತಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತ

ವರ್ಗದ ವಿದ್ಯಾರ್ಥಿಗಳು ಈ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಹೆಣ್ಣು ಮಕ್ಕಳಿಗಾಗಿಯೇ 114 ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಿಗೆ ಸಂಬಂಧಪಟ್ಟಂತೆ 150 ಕಟ್ಟಡಗಳು ನಿರ್ಮಾಣ ಹಂತದಲ್ಲಿವೆ.

36. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಹಾಸ್ಟೆಲುಗಳಲ್ಲಿ ಇರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗಾಗಿ ಆಹಾರ ವೆಚ್ಚಗಳನ್ನು ಅನುಕ್ರಮವಾಗಿ ಮಾಸಿಕ 600 ರೂಪಾಯಿಗಳಿಗೆ ಮತ್ತು 650 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಹಾಗೆಯೇ ಆಶ್ರಮ ಶಾಲೆಗಳಲ್ಲಿ ಇರುವ ವಿದ್ಯಾರ್ಥಿಗಳಿಗಾಗಿ ಆಹಾರದ ವೆಚ್ಚವನ್ನು ಮಾಸಿಕ 500 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.

ಅಲ್ಪಸಂಖ್ಯಾತರ ಕ್ಷೇಮಾಭ್ಯುದಯ

37. ವಕ್ಫ್ ಸ್ವತ್ತುಗಳ ಅಭಿವೃದ್ಧಿಯನ್ನು ನಿರ್ಧರಿಸಲು ಮತ್ತು ಮೇಲ್ವಿಚಾರಣೆ ನಡೆಸಲು ಒಂದು ಕಾರ್ಯಪಡೆಯನ್ನು ರಚಿಸಲಾಗಿದೆ. ಅಲ್ಪ ಸಂಖ್ಯಾತರನ್ನು ಆರ್ಥಿಕವಾಗಿ ಸದೃಢರನ್ನಾಗಿಸಲು ಮತ್ತು ಅವರ ಹಣಕಾಸು ಸ್ಥಿತಿಯನ್ನು ಉತ್ತಮಪಡಿಸಲು, ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳಾದ ನರ್ಸಿಂಗ್, ಅರೆವೈದ್ಯಕೀಯ, ಪ್ಲಾಸ್ಟಿಕ್ ಇಂಜಿನಿಯರಿಂಗ್ ಮತ್ತು ಗಣಕ ಯಂತ್ರಗಳಲ್ಲಿ ತರಬೇತಿ ನೀಡಲು ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕುಳಿತುಕೊಳ್ಳುವ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಸಂಸ್ಥೆಗಳಲ್ಲಿ ತರಬೇತಿ ನೀಡಲಾಗುತ್ತದೆ. ಅಲ್ಪಸಂಖ್ಯಾತರಿಗಾಗಿ ಸಮುದಾಯ ಭವನ/ಷಾದಿ ಮಹಲ್‌ಗಳ ನಿರ್ಮಾಣ ಕಾರ್ಯಕ್ಕಾಗಿ ರೂ. 562 ಲಕ್ಷಗಳನ್ನು ಮಂಜೂರು ಮಾಡಲಾಗಿದೆ. ಈ ಪ್ರಯೋಜನವನ್ನು 69 ಸಂಸ್ಥೆಗಳು ಉಪಯೋಗಿಸಿಕೊಂಡಿವೆ.

ವಸತಿ

38. ಪ್ರಸಕ್ತ ಸಾಲಿನಲ್ಲಿ ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತವು ವಿವಿಧ ಯೋಜನೆಗಳ ಅಡಿಯಲ್ಲಿ ಸುಮಾರು 2.41 ಲಕ್ಷ ಮನೆಗಳ ನಿರ್ಮಾಣ ಮಾಡಿದೆ ಮತ್ತು 80,861 ನಿವೇಶನಗಳನ್ನು ವಿತರಿಸಿದೆ. ಇದುವರೆಗೆ ಪ್ರಸಕ್ತ ವರ್ಷದಲ್ಲಿ ಆದ ವೆಚ್ಚವು ರೂ. 1,017 ಕೋಟಿಗಳು.

ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯ

39. ನನ್ನ ಸರ್ಕಾರವು, ರಾಜ್ಯದಲ್ಲಿ, ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅತಿ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದೆ. ಯೋಜನೆಯ ಅಡಿಯಲ್ಲಿ ರಾಜ್ಯದ ಉತ್ತಮ ಸಾಧನೆಯನ್ನು ಪರಿಗಣಿಸಿ, ಭಾರತ ಸರ್ಕಾರವು, ವಾರ್ಷಿಕ ಹಣಕಾಸು ಹಂಚಿಕೆಯನ್ನು ರೂ. 1084 ಕೋಟಿಗಳಿಂದ ರೂ. 2846 ಕೋಟಿಗಳವರೆಗೆ ಹೆಚ್ಚಿಸಲು ಅನುಮೋದನೆ ನೀಡಿದೆ. ಈ ಯೋಜನೆಯ ಅನುಷ್ಠಾನದಲ್ಲಿ ತೋರಿದ ಅತ್ಯುತ್ತಮ ಸಾಧನೆಗಾಗಿ ಬೆಳಗಾಂ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ರಾಷ್ಟ್ರೀಯ ಪುರಸ್ಕಾರವನ್ನು ನೀಡಲಾಗಿದೆ ಎಂದು ತಮಗೆ ತಿಳಿಸಲು ಹರ್ಷಿಸುತ್ತೇನೆ.

40. ಪ್ರಸಕ್ತ ವರ್ಷದಲ್ಲಿ, 57.34 ಲಕ್ಷ ಕುಟುಂಬಗಳಿಗೆ ಉದ್ಯೋಗ ಕಾರ್ಡ್‌ಗಳನ್ನು ನೀಡಲಾಗಿದೆ ಮತ್ತು 27.46 ಲಕ್ಷ ಕುಟುಂಬಗಳಿಗೆ ಉದ್ಯೋಗವನ್ನು ಒದಗಿಸಲಾಗಿದೆ. ಸುಮಾರು 1446 ಲಕ್ಷ ಕೆಲಸದ ದಿನಗಳನ್ನು ಸೃಜಿಸಲಾಗಿದೆ.

41. ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯ ಅಡಿಯಲ್ಲಿ, ಈ ವರ್ಷದಲ್ಲಿ ರೂ. 581 ಕೋಟಿಗಳನ್ನು ವಿನಿಯೋಗಿಸಲಾಗಿದೆ ಮತ್ತು 1714 ಕಿ.ಮೀ.ಗಳ ರಸ್ತೆಯನ್ನು ನಿರ್ಮಿಸಲಾಗಿದೆ. ಇದರೊಂದಿಗೆ, ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ ಸಂಪರ್ಕಗಳ ಸುಧಾರಣೆಗಾಗಿ ರಾಜ್ಯ ಸರ್ಕಾರದ ನಿಧಿಯಿಂದ ರೂ. 150 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

42. ನನ್ನ ಸರ್ಕಾರವು, ಪ್ರಸಕ್ತ ಹಣಕಾಸು ವರ್ಷದಲ್ಲಿ, ಗ್ರಾಮೀಣ ನೀರು ಸರಬರಾಜಿಗಾಗಿ ರೂ. 832 ಕೋಟಿಗಳನ್ನು ಒದಗಿಸಿದೆ. ಭಾರತ ಸರ್ಕಾರದಿಂದ, ಪ್ರಸಕ್ತ ವರ್ಷದಲ್ಲಿ, ರಾಜ್ಯದಲ್ಲಿನ 245 ಗ್ರಾಮ ಪಂಚಾಯತಿಗಳು ನಿರ್ಮಲ ಗ್ರಾಮ ಪುರಸ್ಕಾರ ಪ್ರಶಸ್ತಿಗಳನ್ನು ಪಡೆದಿವೆ ಎಂದು ತಿಳಿಸಲು ನಾನು ಹರ್ಷಿಸುತ್ತೇನೆ.

43. ಸುವರ್ಣಗ್ರಾಮ ಯೋಜನೆಯಡಿಯಲ್ಲಿ ಮೊದಲನೇ ಹಂತದಲ್ಲಿ 1204 ಗ್ರಾಮಗಳನ್ನು, ಎರಡನೇ ಹಂತದಲ್ಲಿ 222 ಗ್ರಾಮಗಳನ್ನು ಹಾಗೂ ಮೂರನೇ ಹಂತದಲ್ಲಿ 1547 ಗ್ರಾಮಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸಲಾಗುತ್ತಿದೆ.

ಕೌಶಲ್ಯ ವರ್ಧನೆ

44. ನನ್ನ ಸರ್ಕಾರದ ಹೆಗ್ಗಳಿಕೆಯ ಕಾರ್ಯಕ್ರಮವೆಂದರೆ, ನಿರುದ್ಯೋಗಿ ಯುವಕರ ಕೌಶಲ್ಯ ವರ್ಧನೆ ಮಾಡಿ ಅವರಿಗೆ ಉದ್ಯೋಗ ಸೃಜನೆ ಮಾಡುವುದು. ಇದುವರೆಗೂ ಕರ್ನಾಟಕ ವೃತ್ತಿಪರ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮದಿಂದ 11 ಬೃಹತ್ ಉದ್ಯೋಗ ಮತ್ತು ಕೌಶಲ್ಯ ಮೇಳಗಳನ್ನು ಮತ್ತು 30 ಜಿಲ್ಲಾ ಮಟ್ಟದ ಉದ್ಯೋಗ ಮೇಳಗಳನ್ನು ಏರ್ಪಡಿಸಲಾಗಿದೆ. ಈ ಕಾರ್ಯಕ್ರಮವು ಪ್ರಾರಂಭಗೊಂಡಾಗಿನಿಂದಲೂ, 1.95 ಲಕ್ಷ ಜನರಿಗೆ ಕೌಶಲ್ಯ ತರಬೇತಿಯನ್ನು ನೀಡಲಾಗಿದೆ ಮತ್ತು ಸುಮಾರು 1.11 ಲಕ್ಷ ವ್ಯಕ್ತಿಗಳಿಗೆ ಉದ್ಯೋಗ ದೊರಕಿಸಿ ಕೊಡಲಾಗಿದೆ.

45. ಪ್ರಸಕ್ತ ವರ್ಷದಲ್ಲಿ, ಒಂದು ಪ್ರಾಯೋಗಿಕ ಯೋಜನೆ ಎಂಬಂತೆ, ಬೆಳಗಾಂ, ಶಿವಮೊಗ್ಗ, ಮೈಸೂರು, ದಕ್ಷಿಣ ಕನ್ನಡ, ಬೆಂಗಳೂರು ಗ್ರಾಮೀಣ ಜಿಲ್ಲೆಗಳನ್ನು ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯ ಅನುಷ್ಠಾನಕ್ಕಾಗಿ ಆಯ್ಕೆ ಮಾಡಲಾಗಿದೆ. 36 ಸರ್ಕಾರಿ ಐಟಿಐಗಳನ್ನು ಭಾರತ ಸರ್ಕಾರದ ಅನುದಾನಿತ ಯೋಜನೆಯಡಿ ಉತ್ಕೃಷ್ಟತಾ ಕೇಂದ್ರಗಳಾಗಿ ಉನ್ನತೀಕರಿಸಲಾಗಿದೆ. 74 ಐಟಿಐಗಳನ್ನು ಸರ್ಕಾರಿ–ಖಾಸಗಿ ಸಹಭಾಗಿತ್ವದಲ್ಲಿ ಆಧುನೀಕರಣಕ್ಕಾಗಿ ಕೈಗೆತ್ತಿಕೊಳ್ಳಲಾಗಿದೆ.

ಉನ್ನತ ಶಿಕ್ಷಣ

46. ನನ್ನ ಸರ್ಕಾರವು, ಈಗಾಗಲೇ ಸಂಗೀತ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದೆ. ಮೈಸೂರು ವಿಶ್ವವಿದ್ಯಾಲಯ ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳನ್ನು ಮಾದರಿ ವಿಶ್ವವಿದ್ಯಾಲಯಗಳನ್ನಾಗಿ ಪುನರ್‌ರೂಪಿಸಲು ಸಹ ಪ್ರಸ್ತಾವಿಸಲಾಗಿದೆ. ಈ ದಿಶೆಯಲ್ಲಿ ಡಾ॥ ಕಸ್ತೂರಿರಂಗನ್, ಡಾ॥ ಗೋವರ್ಧನ್ ಮೆಹ್ತಾ, ಡಾ॥ ಬಲರಾಂ, ಪ್ರೊ॥ ಮಾಧವ ಮೆನನ್ ಮತ್ತು ಡಾ॥ ರಾಮರಾವ್ ಇವರನ್ನೊಳಗೊಂಡ ತಜ್ಞರ ತಂಡದ ನೆರವಿನೊಂದಿಗೆ ಕರ್ನಾಟಕ ಜ್ಞಾನ ಆಯೋಗವು ಅನೇಕ ಶಿಫಾರಸ್ಸುಗಳನ್ನು ಮಾಡಿದೆ. ನನ್ನ ಸರ್ಕಾರವು ಈ ವಿಶ್ವವಿದ್ಯಾಲಯಗಳನ್ನು ಪುನರ್‌ರಚಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತದೆ. ರಾಜ್ಯದಲ್ಲಿ ಇರುವ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಗಳು, ಪರೀಕ್ಷೆಗಳು ಮತ್ತು ಫಲಿತಾಂಶಗಳ ಘೋಷಣೆ ಇವುಗಳನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಏಕರೂಪದ ಕ್ಯಾಲೆಂಡರ್ ಅನ್ನೂ ನಿಗದಿಪಡಿಸಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ

47. ನನ್ನ ಸರ್ಕಾರವು, ತನ್ನ ಜನರ ಸಾಂಸ್ಕೃತಿಕ ಮತ್ತು ಸಾಕ್ಷರತಾ ಮಟ್ಟವನ್ನು ಗುರುತಿಸಿ ಉತ್ತೇಜಿಸಲು ಉತ್ಸುಕವಾಗಿದೆ. ಈ ನಿಟ್ಟಿನಲ್ಲಿ, ಮೊದಲ ಬಾರಿಗೆ, ಸಂತಕವಿ ಕನಕದಾಸರ ಜನ್ಮದಿನೋತ್ಸವವನ್ನು ರಾಜ್ಯಾದ್ಯಂತ ಆಚರಿಸಲಾಗಿದೆ ಮತ್ತು ಕನಕ ಜಯಂತಿಯ ದಿನವನ್ನು ಸಾರ್ವಜನಿಕ ರಜಾದಿನವಾಗಿ ಘೋಷಿಸಿದೆ.

48. ಕನ್ನಡ ಸಾಹಿತ್ಯವನ್ನು ಪ್ರೋತ್ಸಾಹಿಸುವ ನಮ್ಮ ನಿರಂತರ ಪ್ರಯತ್ನದ ಅಂಗವಾಗಿ ಕನ್ನಡ ಸಾಹಿತ್ಯ ಪರಿಷತ್‌ಗೆ ಅದರ ಚಟುವಟಿಕೆಗಳಿಗಾಗಿ ರೂ. 3.42 ಕೋಟಿಗಳನ್ನು ನೀಡಲಾಗಿದೆ. 2010ರ ಫೆಬ್ರುವರಿ ತಿಂಗಳಿನಲ್ಲಿ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲು ರೂ. 1.5 ಕೋಟಿಗಳ ವಿಶೇಷ ನೆರವನ್ನೂ ನೀಡಲಾಗಿದೆ.

49 ರಾಜ್ಯವು, ಸಂಗೀತ ಮತ್ತು ಸಾಹಿತ್ಯ ದಿಗ್ಗಜರಾದ ಸವಾಯಿ ಗಂಧರ್ವ, ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ರಾಜಗುರು ಮತ್ತು ಬೆಟಗೇರಿ ಕೃಷ್ಣಶರ್ಮ ಇವರ ಜನ್ಮಸ್ಥಳಗಳು ಮತ್ತು ಸ್ಮಾರಕಗಳ ಅಭಿವೃದ್ಧಿಗೆ ಕ್ರಮ ಕೈಗೊಂಡಿದೆ. ಅದೇ ರೀತಿಯಲ್ಲಿ, ಸ್ವಾತಂತ್ರ್ಯ ಹೋರಾಟಗಾರರಾದ ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಮೈಲಾರ ಮಹದೇವಪ್ಪ, ಗಂಗಾಧರ ದೇಶಪಾಂಡೆ, ಹರ್ಡೇಕರ್ ಮಂಜಪ್ಪ ಮತ್ತು ಇತರರ ಸ್ಮಾರಕಗಳನ್ನು ನಿರ್ಮಿಸಲು ಹಣಕಾಸಿನ ನೆರವನ್ನು ಒದಗಿಸಿದೆ.

50. ಇತ್ತೀಚೆಗೆ ನಿಧನರಾದ ಖ್ಯಾತ ಚಲನಚಿತ್ರ ನಟರಾದ ಡಾ॥ ವಿಷ್ಣುವರ್ಧನ್ ಅವರ ಸ್ಮಾರಕವನ್ನು ಬೆಂಗಳೂರಿನಲ್ಲಿ ರೂ. 10 ಕೋಟಿಗಳ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ.

ಪ್ರವಾಸೋದ್ಯಮದಲ್ಲಿ ಅವಕಾಶಗಳು

51. ನನ್ನ ಸರ್ಕಾರವು, ರಾಜ್ಯದಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ಚುರುಕುಗೊಳಿಸಲು ಹಾಗೂ ರಾಜ್ಯದ ಪ್ರವಾಸೋದ್ಯಮ ಸಾಮರ್ಥ್ಯವನ್ನು ಚೆನ್ನಾಗಿ ಬಳಸಿಕೊಳ್ಳಲು ಹೊಸ ಪ್ರವಾಸೋದ್ಯಮ ನೀತಿ (2009–14) ಯನ್ನು ಪ್ರಾರಂಭಿಸಿದೆ. ಇದು, ಮುಂದಿನ 10 ವರ್ಷಗಳಲ್ಲಿ, ರೂ. 25,000 ಕೋಟಿಗಳ ಬಂಡವಾಳ ಹೂಡಿಕೆ ತರಲಿದೆ ಮತ್ತು ಕರ್ನಾಟಕವನ್ನು ಅಗ್ರಮಾನ್ಯ ಪ್ರವಾಸೋದ್ಯಮ ತಾಣವನ್ನಾಗಿ ಮಾಡುತ್ತದೆ ಎಂದು ನಿರೀಕ್ಷಿಸಲಾಗಿದೆ.

52. ಕಲೆ, ವಾಸ್ತುಶಿಲ್ಪ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಗೆ, ಇತಿಹಾಸ ಪ್ರಸಿದ್ಧ ಶ್ರೀಕೃಷ್ಣದೇವರಾಯನ ಕೊಡುಗೆಯ ಸ್ಮರಣಾರ್ಥವಾಗಿ ಶ್ರೀಕೃಷ್ಣದೇವರಾಯನ 500 ನೇ ಪಟ್ಟಾಭಿಷೇಕ ಮಹೋತ್ಸವವನ್ನು ಹಂಪಿಯಲ್ಲಿ ಅದ್ಧೂರಿಯಾಗಿ ನಡೆಸಲಾಯಿತು. ಹಂಪಿಯಲ್ಲಿ 3 ದಿನಗಳ ಕಾಲ ನಡೆದ ಈ ಉತ್ಸವದಲ್ಲಿ; ಮಕ್ಕಳೂ ಸೇರಿದಂತೆ ರಾಜ್ಯದ 20 ಲಕ್ಷ ಜನ ಭಾಗವಹಿಸಿದ್ದರು. ಈ ಉತ್ಸವವು ಪರಂಪರೆ ಪ್ರವಾಸೋದ್ಯಮಕ್ಕೆ ಒತ್ತು ನೀಡುತ್ತದೆ ಎಂದು ನಿರೀಕ್ಷಿಸಲಾಗಿದೆ.

53. ಬೇಲೂರು, ಹಂಪಿ, ಪಟ್ಟದಕಲ್ಲು, ಬಿಜಾಪುರ, ಮಂಗಳೂರು ಮುಂತಾದ ರಾಜ್ಯದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಅಂತರ್‌ರಾಷ್ಟ್ರೀಯ ಗುಣಮಟ್ಟದ ಪ್ರವಾಸಿ ಸೌಲಭ್ಯಗಳನ್ನು ಸೃಜಿಸುವುದಕ್ಕೆ ನನ್ನ ಸರ್ಕಾರವು ಕ್ರಮತೆಗೆದುಕೊಂಡಿದೆ. ರಾಜ್ಯದ ಐದು ಕಾಲೇಜುಗಳಲ್ಲಿ ಪ್ರವಾಸೋದ್ಯಮ ಆಡಳಿತ ಕೋರ್ಸುಗಳಲ್ಲಿ ಐದು ವರ್ಷದ ಸಮಗ್ರ ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ಪ್ರಾರಂಭಿಸಲಾಗಿದೆ. ಪ್ರವಾಸೋದ್ಯಮದಲ್ಲಿ ವೈವಿಧ್ಯಮಯವಾದ ಮತ್ತು ಸುಸ್ಥಿರವಾದ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಹೆಲಿ ಪ್ರವಾಸೋದ್ಯಮ ಮತ್ತು ಆರೋಗ್ಯ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.

ಕೈಗಾರಿಕಾ ಬೆಳವಣಿಗೆ

54. ನನ್ನ ಸರ್ಕಾರವು 1–4–2009 ರಿಂದ ಜಾರಿಗೆ ಬರುವಂತೆ ಹೊಸ ಕೈಗಾರಿಕಾ ನೀತಿ 2009–14 ನ್ನು ಜಾರಿಗೆ ತಂದಿದೆ. ಈಗಿರುವ ವಾಡಿಕೆಯ ಕೈಗಾರಿಕಾ ಪ್ರೋತ್ಸಾಹಕಗಳ ಜೊತೆಗೆ ಮೌಲ್ಯವರ್ಧಿತ ತೆರಿಗೆ ಮೇಲೆ ಬಡ್ಡಿ ರಹಿತ ಸಾಲ, ಆ್ಯಂಕರ್ ಘಟಕಗಳಿಗೆ ಸಹಾಯ ಧನ, ಬಡ್ಡಿ ಸಹಾಯ ಧನ, ವಿದ್ಯುತ್ ಮತ್ತು ಜಲ ಸಂರಕ್ಷಣೆ ಪ್ರೋತ್ಸಾಹಕಗಳಂಥ ಹೊಸ ಪ್ರೋತ್ಸಾಹಕಗಳನ್ನು ಜಾರಿಗೆ ತರಲಾಗಿದೆ.

55. ಈ ವರ್ಷ, ನನ್ನ ಸರ್ಕಾರವು ಒಟ್ಟು ರೂ. 1.95 ಲಕ್ಷ ಕೋಟಿಗಳ ಬಂಡವಾಳ ಹೂಡಿಕೆಯ 76 ದೊಡ್ಡ ಮತ್ತು ಅತಿದೊಡ್ಡ ಕೈಗಾರಿಕಾ ಪ್ರಸ್ತಾವಗಳಿಗೆ ಅನುಮೋದನೆ ನೀಡಿದೆ. ಇದರಿಂದ 3.20 ಲಕ್ಷ ಜನರಿಗೆ ಉದ್ಯೋಗಾವಕಾಶ ದೊರೆಯಲಿದೆ.

56. ಕೈಗಾರಿಕಾ ಕಾರಿಡಾರ್‌ಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಹಾಗೂ ಅವುಗಳನ್ನು ಪ್ರಮುಖ ಉದ್ಯಮಗಳಾದ ಉಕ್ಕು, ಸಿಮೆಂಟ್, ಜವಳಿ, ಮಾಹಿತಿ ತಂತ್ರಜ್ಞಾನ, ಆಟೋಮೊಬೈಲ್, ಫಾರ್ಮಸೂಟಿಕಲ್ ಮುಂತಾದವುಗಳೊಡನೆ ಜೊತೆಗೂಡಿಸುವ ಬಗ್ಗೆ, ಸರ್ಕಾರವು ಗಮನವನ್ನು ಕೇಂದ್ರೀಕರಿಸಿದೆ. ಹಿಂದುಳಿದ ಜಿಲ್ಲೆಗಳಿಗೆ ಹೆಚ್ಚುವರಿ

ಪ್ರೋತ್ಸಾಹಕಗಳನ್ನು ಸಹ ನೀಡುತ್ತಿದ್ದೇವೆ. ಇದನ್ನು ಕೈಗಾರಿಕಾ ವಲಯವು ಸ್ವಾಗತಿಸಿದೆ ಮತ್ತು ಇದೊಂದು ಅತ್ಯಂತ ಪ್ರಗತಿದಾಯಕ ಉದ್ಯಮ ಸ್ನೇಹಿ ಕ್ರಮವೆಂದು ಶ್ಲಾಘಿಸಲಾಗಿದೆ.

57. ರಾಜ್ಯದಲ್ಲಿ ಹೆಚ್ಚು ಬಂಡವಾಳ ಹೂಡಿಕೆಯನ್ನು ಆಕರ್ಷಿಸುವ ಮತ್ತು ಹೆಚ್ಚುವರಿ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಉದ್ದೇಶದಿಂದ 2010ರ ಜೂನ್ ತಿಂಗಳ 3 ಮತ್ತು 4 ರಂದು ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ನಡೆಸಲು ಉದ್ದೇಶಿಸಲಾಗಿದೆ.

58. ಮಾಹಿತಿ ತಂತ್ರಜ್ಞಾನವನ್ನು ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸುವ ಉದ್ದೇಶದಿಂದ, ಸರ್ಕಾರವು ಗ್ರಾಮೀಣ ಬಿ.ಪಿ.ಓ.ಗಳನ್ನು ಸ್ಥಾಪಿಸುವುದಾಗಿ ಕಳೆದ ವರ್ಷ ಘೋಷಿಸಿತ್ತು. ಸದರಿ ಯೋಜನೆಗೆ ಅಭೂತಪೂರ್ವವಾದ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ತಮಗೆ ತಿಳಿಸಲು ಹರ್ಷಿಸುತ್ತೇನೆ. ನನ್ನ ಸರ್ಕಾರವು, ಭಾರತ ಸರ್ಕಾರದ ಮಾರ್ಗಸೂಚಿಗಳನ್ವಯ ಮಾಹಿತಿ ತಂತ್ರಜ್ಞಾನ ಹೂಡಿಕೆ ಪ್ರದೇಶವನ್ನು ಸ್ಥಾಪಿಸುವುದಕ್ಕಾಗಿ ಸಮಗ್ರ ಮಾಹಿತಿ ತಂತ್ರಜ್ಞಾನ ನಗರವನ್ನು ಸ್ಥಾಪಿಸಲು ಕ್ರಮಕೈಗೊಂಡಿದೆ. ಇಂಥ ಸಮಗ್ರ ಉಪನಗರಗಳಲ್ಲಿ ಮೊದಲನೆಯದನ್ನು ಬೆಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದ ಹತ್ತಿರ 40 ಚದರ ಕಿ.ಮೀ. ಪ್ರದೇಶದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

59. ಮೈಸೂರು, ಮಂಗಳೂರು, ಧಾರವಾಡ ಮತ್ತು ಬೀದರ್‌ಗಳಲ್ಲಿ ವಲಯ ನಿರ್ದಿಷ್ಟ ಜೈವಿಕ ತಂತ್ರಜ್ಞಾನ ಪಾರ್ಕ್‌ಗಳನ್ನು ಸಹ ಸ್ಥಾಪಿಸಲು ನಿರ್ಧರಿಸಿದೆ. ನನ್ನ ಸರ್ಕಾರವು ಇತ್ತೀಚೆಗೆ ಸೆಮಿಕಂಡಕ್ಟರ್ ನೀತಿಯನ್ನು ಘೋಷಿಸಿದ್ದು. ಇದು ರಾಷ್ಟ್ರದಲ್ಲೇ ಪ್ರಪ್ರಥಮ ಉಪಕ್ರಮವಾಗಿದೆ. ಸದರಿ ನೀತಿಯನ್ನು ಒಂದು ಸ್ವಾಗತಾರ್ಹ ಕ್ರಮವೆಂದು ಶ್ಲಾಘಿಸಲಾಗಿದೆ.

ಮೂಲಭೂತಸೌಕರ್ಯ ಅಭಿವೃದ್ಧಿಗೆ ಪ್ರಾಧಾನ್ಯತೆ

60. ಮೈಸೂರಿನಲ್ಲಿ ಈಗಿರುವ ವಿಮಾನ ನಿಲ್ದಾಣವನ್ನು ವಿಸ್ತರಿಸಲಾಗುತ್ತಿದೆ. ಶಿವಮೊಗ್ಗ, ಗುಲ್ಬರ್ಗಾ, ಬಿಜಾಪುರ ಹಾಗೂ ಹಾಸನದ ವಿಮಾನ ನಿಲ್ದಾಣಗಳನ್ನು ಖಾಸಗಿ ಪ್ರವರ್ತಕರ ಮೂಲಕ ಸರ್ಕಾರಿ–ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಹುಬ್ಬಳ್ಳಿಯಲ್ಲಿನ ಹಾಲಿ ವಿಮಾನ ನಿಲ್ದಾಣವನ್ನು ಅಂತರ್‌ರಾಷ್ಟ್ರೀಯ ಗುಣಮಟ್ಟಕ್ಕೆ ಮೇಲ್ದರ್ಜೆಗೇರಿಸಲಾಗುತ್ತಿದೆ ಹಾಗೂ ವಿಸ್ತರಣೆಗಾಗಿ ಅಗತ್ಯವಾದ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಮಂಗಳೂರು ಹಾಗೂ ಬೆಳಗಾವಿ ವಿಮಾನ ನಿಲ್ದಾಣಗಳ ಅಭಿವೃದ್ಧಿಗೆ ಅಗತ್ಯವಾದ ಹೆಚ್ಚುವರಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ದಾವಣಗೆರೆ, ರಾಯಚೂರು, ಚಿಕ್ಕಮಗಳೂರು, ಉಡುಪಿ, ಕುಶಾಲನಗರ, ಗೋಕರ್ಣ, ಚಿತ್ರದುರ್ಗ, ಬಾಗಲಕೋಟೆ, ಹಾವೇರಿ, ಗದಗ ಹಾಗೂ ಕೊಳ್ಳೇಗಾಲಗಳಲ್ಲಿ 11 ವಿಮಾನ ಇಳಿದಾಣಗಳನ್ನು ಅಭಿವೃದ್ಧಿಪಡಿಸಲು ಸಹ ಉದ್ದೇಶಿಸಲಾಗಿದೆ. ಸಣ್ಣ ಬಂದರುಗಳ ಯೋಜನೆಯನ್ನು, ಹಳದಿಪುರ [ಸ್ವಿಸ್ ಚಾಲೆಂಜ್ ವಿಧಾನದಲ್ಲಿ] ಹಾಗೂ ತದಡಿಯಲ್ಲಿ (ಸರ್ಕಾರಿ–ಖಾಸಗಿ ಸಹಭಾಗಿತ್ವದಲ್ಲಿ) ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

61. ನನ್ನ ಸರ್ಕಾರವು ಕರ್ನಾಟಕದ ರೈಲು ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವುದಕ್ಕೆ ಕಂಕಣಬದ್ಧವಾಗಿದೆ. ಇದೇ ಮೊದಲಬಾರಿಗೆ ರಾಜ್ಯ ಸರ್ಕಾರವು ಹೊಸ ಯೋಜನೆಗಳ ಯೋಜನಾ ವೆಚ್ಚದ ಶೇಕಡ 50ರಷ್ಟು ವೆಚ್ಚವನ್ನು ವಹಿಸಿಕೊಳ್ಳಲು ಹಾಗೂ ಭೂ ಸ್ವಾಧೀನತೆಯ ವೆಚ್ಚವನ್ನು ಸಹ ಭರಿಸಲು ಮುಂದೆ ಬಂದಿದೆ. ರಾಜ್ಯ ಸರ್ಕಾರವು ಹೊಸ ಯೋಜನೆಗಳನ್ನು ಸರ್ಕಾರಿ–ಖಾಸಗಿ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳಬೇಕೆಂದು ಕೇಂದ್ರ ರೈಲ್ವೆ ಮಂತ್ರಾಲಯವನ್ನು ಒತ್ತಾಯಿಸಿದೆ. ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ 23 ರೈಲು ಮೇಲು ಸೇತುವೆ / ರೈಲು ಕೆಳ ಸೇತುವೆಗಳ ನಿರ್ಮಾಣ ಕಾರ್ಯಕೈಗೊಳ್ಳಲು ಅನುಮೋದನೆ

ನೀಡಲಾಗಿದೆ. ಗದಗ–ಶೋಲಾಪುರ ರೈಲು ಮಾರ್ಗವನ್ನು ಈಗ ಪೂರ್ಣಗೊಳಿಸಿ, ಸಂಚಾರಕ್ಕೆ ತೆರೆಯಲಾಗಿದೆ. ಬೆಂಗಳೂರು–ರಾಮನಗರ ಜೋಡಿ ರೈಲು ಮಾರ್ಗವನ್ನು ಪೂರ್ಣಗೊಳಿಸಲಾಗಿದೆ. ರಾಮನಗರ–ಮೈಸೂರು ಮಾರ್ಗದ ಕಾಮಗಾರಿಯು ಪ್ರಗತಿಯಲ್ಲಿದೆ. ಇದೇ ರೀತಿಯಾಗಿ ಶಿವಮೊಗ್ಗ–ತಾಳಗುಪ್ಪ ಗೇಜ್ ಪರಿವರ್ತನೆ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ ಹಾಗೂ ಶೀಘ್ರವೇ ರೈಲು ಸಂಚಾರ ಪ್ರಾರಂಭವಾಗುವ ನಿರೀಕ್ಷೆ ಇದೆ.

62. ಸಮಗ್ರ ಅಭಿವೃದ್ಧಿಗೆ ಗುಣಮಟ್ಟದ ರಸ್ತೆ ಬಹುಮುಖ್ಯ ಹಾಗೂ ರಾಜ್ಯ ಸರ್ಕಾರ ಇದಕ್ಕಾಗಿ ಈವರೆಗೆ ರೂ. 739 ಕೋಟಿಗಳನ್ನು ವೆಚ್ಚ ಮಾಡಿದೆ. ಕೇಂದ್ರ ರಸ್ತೆ ನಿಧಿ ಅಡಿಯಲ್ಲಿ 950 ಕಾಮಗಾರಿಗಳನ್ನು ಮಂಜೂರು ಮಾಡಲಾಗಿದೆ ಮತ್ತು ರೂ.260 ಕೋಟಿ ವೆಚ್ಚದಲ್ಲಿ 1,668 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ. ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ–2ರ ಅಡಿ ಕೈಗೆತ್ತಿಕೊಳ್ಳಲಾಗುವ ರಸ್ತೆಗಳ ಮೊದಲ ಹಂತಕ್ಕಾಗಿ ಟೆಂಡರ್ ಕರೆಯುವುದಕ್ಕೆ ಇತ್ತೀಚೆಗೆ ವಿಶ್ವಬ್ಯಾಂಕ್ ತನ್ನ ನಿರಾಕ್ಷೇಪಣಾ ಪತ್ರ ನೀಡಿದೆ. ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ –2ರಡಿ ಒಟ್ಟು 826 ಕಿ.ಮೀ.ಗಳ ಉದ್ದದ ರಸ್ತೆಯನ್ನು ರೂ. 1650 ಕೋಟಿಗಳ ಅಂದಾಜು ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಾಗುವುದು.

ನಗರಾಭಿವೃದ್ಧಿ

63. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ಬೆಂಗಳೂರು ಮೆಟ್ರೋ ಕಾಮಗಾರಿಯ ವಾಸ್ತವಿಕ ಪ್ರಗತಿಯು ಶೇಕಡ 0.1 ಆಗಿತ್ತು ಮತ್ತು ಈಗ ಶೇಕಡ 22.4 ರಷ್ಟು ಪ್ರಗತಿ ಆಗಿದೆ. ಬೆಂಗಳೂರು ಮೆಟ್ರೋ ಮೊದಲನೇ ಹಂತದ ನಿರ್ಮಾಣವು ಭರದಿಂದ ಸಾಗಿದೆ. ಬೈಯಪ್ಪನ ಹಳ್ಳಿಯಿಂದ ಮಹಾತ್ಮಾಗಾಂಧಿ ರಸ್ತೆಯವರೆಗಿನ ಕಾಮಗಾರಿಯು ತ್ವರಿತ ಗತಿಯಿಂದ ಮುನ್ನಡೆಯುತ್ತಿದ್ದು, ಶೇಕಡ 70ರಷ್ಟು ಕಾಮಗಾರಿಯು ಮುಗಿದಿದೆ ಹಾಗೂ ಡಿಸೆಂಬರ್ 2010ರಲ್ಲಿ ಕಾಮಗಾರಿ

ಮುಕ್ತಾಯಗೊಳಿಸಿ ಸಂಚಾರ ಆರಂಭಿಸಲು ಉದ್ದೇಶಿಸಲಾಗಿದೆ. ನನ್ನ ಸರ್ಕಾರವು ಮೆಟ್ರೋ ಯೋಜನೆಯ ಎಲ್ಲಾ ಮಾರ್ಗಗಳ ನಿರ್ಮಾಣವನ್ನು ಮಾರ್ಚ್ 2013ರಲ್ಲಿ ಪೂರ್ಣಗೊಳಿಸಿ ಸಂಚಾರ ಆರಂಭವಾಗುವಂತೆ ನೋಡಿಕೊಳ್ಳುತ್ತದೆ.

64. ನನ್ನ ಸರ್ಕಾರವು ಬೆಂಗಳೂರು ನಗರದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಮಗಾರಿಗಳ ಮೇಲಿನ ನಿರೀಕ್ಷಿತ ವೆಚ್ಚವು, 2005–06ರಲ್ಲಿನ ಕೇವಲ ರೂ. 1035 ಕೋಟಿಗಳಿಗೆ ಪ್ರತಿಯಾಗಿ 2009–10ರಲ್ಲಿ ಸುಮಾರು ರೂ. 3100 ಕೋಟಿಗಳಾಗುತ್ತದೆಂದು ನಿರೀಕ್ಷಿಸಲಾಗಿದೆ. ಹಾಗೆಯೇ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಭಿವೃದ್ಧಿ ವೆಚ್ಚವು 2005–06ರಲ್ಲಿ ಇದ್ದ ಕೇವಲ ರೂ. 145 ಕೋಟಿಗಳಿಗೆ ಪ್ರತಿಯಾಗಿ ಸುಮಾರು ರೂ. 873 ಕೋಟಿಗಳಾಗುವುದೆಂದು ನಿರೀಕ್ಷಿಸಲಾಗಿದೆ. ಸರ್ಕಾರವು ಆರ್ಟೀರಿಯಲ್ ರಸ್ತೆಗಳು ಮತ್ತು ಉಪ–ಆರ್ಟೀರಿಯಲ್ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ, ಹೊಸದಾಗಿ ಸೇರಿಸಿದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯಗಳಲ್ಲಿ 12 ಸಿಗ್ನಲ್‌ಮುಕ್ತ ಕಾರಿಡಾರ್ ನಿರ್ಮಾಣಕ್ಕೆ ಅನುಮತಿ ನೀಡಿದೆ.

65. ಬೆಂಗಳೂರು ನಗರದಲ್ಲಿ ಸದಾ ಹೆಚ್ಚುತ್ತಿರುವ ಜನರ ಗೃಹ ನಿರ್ಮಾಣ ಬೇಡಿಕೆಯನ್ನು ಪೂರೈಸಲು, 5 ಹೊಸ ಜನವಸತಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ನಾಡಪ್ರಭು ಕೆಂಪೇಗೌಡ ಬಡಾವಣೆಗಾಗಿ ಭೂ ಸ್ವಾಧೀನಪಡಿಸಿಕೊಳ್ಳಲು ಅಂತಿಮ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ. ಡಾ॥ ಶಿವರಾಮಕಾರಂತ ಬಡಾವಣೆ ಸಂಬಂಧದಲ್ಲಿ, ಈಗಾಗಲೇ ಪ್ರಾರಂಭಿಕ ಅಧಿಸೂಚನೆ ಹೊರಡಿಸಲಾಗಿದ್ದು ವಿಚಾರಣೆ ನಡೆಸಲಾಗುತ್ತಿದೆ. ಶ್ರೀ ಕೆ.ಸಿ. ರೆಡ್ಡಿ ಬಡಾವಣೆ, ಶ್ರೀ ದೇವರಾಜ ಅರಸು ಬಡಾವಣೆ ಮತ್ತು ಶ್ರೀ ನಿಜಲಿಂಗಪ್ಪ ಬಡಾವಣೆಗಳ ಪ್ರಾರಂಭಿಕ ಅಧಿಸೂಚನೆಯನ್ನು ಸದ್ಯದಲ್ಲೇ ಹೊರಡಿಸಲಾಗುವುದು. ಈ ಎಲ್ಲಾ ಬಡಾವಣೆಗಳ

ರಚನೆಯಿಂದಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 1.74 ಲಕ್ಷ ಮನೆ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು.

66. ಭೌಗೋಳಿಕ ಮಾಹಿತಿ ವ್ಯವಸ್ಥೆ ಆಧಾರಿತ ಆಸ್ತಿ ತೆರಿಗೆ ಪದ್ಧತಿ, ಪ್ರಾಪ್ತಿ ಆಧಾರಿತ ಲೆಕ್ಕಪದ್ಧತಿ, ಜನನ ಮತ್ತು ಮರಣ ನೋಂದಣಿಯ ಗಣಕೀಕರಣ ಮತ್ತು ಸಾರ್ವಜನಿಕ ಕುಂದುಕೊರತೆಗಳ ನಿವಾರಣಾ ವ್ಯವಸ್ಥೆ ಮುಂತಾದ ಅನೇಕ ಹೊಸ ಕಾರ್ಯ ವ್ಯವಸ್ಥೆಗಳನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಳವಡಿಸಿಕೊಂಡಿರುವುದರಿಂದ ಶ್ರೀಸಾಮಾನ್ಯನ ಬದುಕು ಸರಳವಾಗಿದೆ ಮತ್ತು ಸುಗಮವಾಗಿದೆ.

67. ದೇಶದಲ್ಲಿಯೇ ಮೊದಲನೆಯದಾಗಿ, ನನ್ನ ಸರ್ಕಾರವು ಸರ್ಕಾರೀ-ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ, ಜಿಐಎಸ್ ಆಧಾರಿತ ಆಸ್ತಿ ತೆರಿಗೆ ನಿರ್ಧರಣಾ ಯೋಜನೆ ಆರಂಭಿಸಿದೆ. ಇದು ಎಲ್ಲ ಆಸ್ತಿಗಳೂ ನೋಂದಣಿಯಾಗುವಂತೆ ಮಾಡುವುದಲ್ಲದೇ ಸ್ವತ್ತಿನ ಮಾಲೀಕರು ಸ್ಪಷ್ಟವಾದ ಆಸ್ತಿ ಹಕ್ಕುಪತ್ರ ಪಡೆಯಲು ಸೌಲಭ್ಯ ಕಲ್ಪಿಸುತ್ತದೆ. ಹಂತಹಂತವಾಗಿ ಈ ಯೋಜನೆಯನ್ನು ರಾಜ್ಯದ ಇತರ ನಗರಗಳಿಗೂ ವಿಸ್ತರಿಸಲಾಗುವುದು.

ಸರಕಾರಿ ಜಮೀನಿನ ಸಂರಕ್ಷಣೆ

68. ಸರಕಾರಿ ಜಮೀನುಗಳ ಅನಧಿಕೃತ ಒತ್ತುವರಿಯನ್ನು ತಡೆಗಟ್ಟಲು ಜಂಟಿ ಸದನಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಕಾರ್ಯಪಡೆಯೊಂದನ್ನು ರಚಿಸಲಾಗಿದೆ. ಈ ಕಾರ್ಯಪಡೆಯು ಈವರೆಗೆ 7.39 ಲಕ್ಷ ಎಕರೆ ಸರ್ಕಾರಿ ಜಮೀನಿನ ಒತ್ತುವರಿಯನ್ನು ಗುರುತಿಸಿದೆ. ನನ್ನ ಸರ್ಕಾರವು ಸರ್ಕಾರಿ ಆಸ್ತಿಗಳ ರಕ್ಷಣೆಗೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಕಂಕಣಬದ್ಧವಾಗಿದೆ.

ಇ-ಆಡಳಿತ ಉಪಕ್ರಮಗಳು

69. ನನ್ನ ಸರ್ಕಾರವು ದೊಡ್ಡ ಪ್ರಮಾಣದಲ್ಲಿ ಇ-ಆಡಳಿತ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ನಾಗರೀಕರಿಗೆ ವಿದ್ಯುನ್ಮಾನ ಮಾಧ್ಯಮದ ಮೂಲಕ ಹೆಚ್ಚು

ಸೇವೆಗಳನ್ನು ನೀಡಲು ಹಲವಾರು ಕ್ರಮಗಳನ್ನು ಕೈಗೊಂಡಿದೆ. ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ 60 **ಬೆಂಗಳೂರು – ಒನ್** ಕೇಂದ್ರಗಳಲ್ಲದೆ, 2010 ರ ಮಾರ್ಚ್ ಅಂತ್ಯದ ವೇಳೆಗೆ ಇತರ ಜಿಲ್ಲಾ ಕೇಂದ್ರಗಳಲ್ಲಿ 20 **ಕರ್ನಾಟಕ – ಒನ್** ಕೇಂದ್ರಗಳು ಕಾರ್ಯಾರಂಭ ಮಾಡಲಿವೆ. ಈ ಕಾರ್ಯಕ್ರಮವನ್ನು ರಾಜ್ಯದಾದ್ಯಂತ ಹಂತ ಹಂತವಾಗಿ ಹೆಚ್ಚಿಸಲಾಗುವುದು. ಕರ್ನಾಟಕ ರಾಜ್ಯ ವಿಸ್ತೃತ ಪ್ರದೇಶ ಜಾಲವು ಕಾರ್ಯಾರಂಭ ಮಾಡಿದೆ. ವಿದ್ಯುನ್ಮಾನ ಸಂಗ್ರಹಣಾ ಮಾದರಿ ಮೂಲಕ ಟೆಂಡರ್‌ಗೆ ಹಾಕಿದ ಕಾಮಗಾರಿಗಳ ಮೌಲ್ಯ ರೂ. 20,000 ಕೋಟಿಗಳಿಗೆ ಏರಿದೆ. ಸಚಿವಾಲಯ ವಾಹಿನಿ, ಹೊಸ ದತ್ತಾಂಶ ಕೇಂದ್ರ, ರಾಜ್ಯ ನಾಗರಿಕ ಸೇವಾ ಕೇಂದ್ರ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಾಮಾನ್ಯ ಸೇವಾ ಕೇಂದ್ರಗಳು ಮೊದಲಾದ ಸರ್ಕಾರ ಕೈಗೊಂಡ ಇ–ಆಡಳಿತದ ಉಪಕ್ರಮಗಳು ವಿದ್ಯುನ್ಮಾನದ ಮೂಲಕ ನಾಗರಿಕ ಸೇವೆಗಳ ನೀಡಿಕೆಯನ್ನು ಮತ್ತಷ್ಟು ಹೆಚ್ಚಿಸಿವೆ.

70. ಮಾಹಿತಿ ಹಕ್ಕು ಕುರಿತ ಕೋರಿಕೆಗಳನ್ನು ಸ್ವೀಕರಿಸುವುದಕ್ಕಾಗಿ ಒಂದು ಕರೆ ಕೇಂದ್ರ (ಕಾಲ್ ಸೆಂಟರ್) ವನ್ನು ಸ್ಥಾಪಿಸುವ ವ್ಯವಸ್ಥೆಯನ್ನು ಪ್ರಾರಂಭಿಸುವ ಬಗ್ಗೆ ಗಂಭೀರವಾಗಿ ಪರಿಶೀಲಿಸಲಾಗುತ್ತಿದೆ. ಈ ಕರೆ ಕೇಂದ್ರವು ಮಾಹಿತಿ ಹಕ್ಕು ಅಧಿನಿಯಮದ ಮೇರೆಗೆ ಸಾರ್ವಜನಿಕ ಮಾಹಿತಿ ಕೋರಿಕೆಗಳನ್ನು ಹಾಗೂ ಅದರ ಮೇರೆಗೆ ಅರ್ಜಿಸಲ್ಲಿಸುವುದಕ್ಕೆ ಸಂಬಂಧಿಸಿದ ವಿಷಯಗಳನ್ನು ನಿರ್ವಹಿಸುತ್ತದೆ. 24/7 ಸಹಾಯವಾಣಿ ಸೌಲಭ್ಯವನ್ನುಳ್ಳ ಈ ಗಣಕೀಕೃತ, ಮಾನವ ಚಾಲಿತ ಸೌಕರ್ಯ ಕೇಂದ್ರವು ಉತ್ತಮ ಆಡಳಿತಕ್ಕಾಗಿ ಸರ್ಕಾರದ ಸೇವಾ ನೀಡಿಕೆ ವ್ಯವಸ್ಥೆಯ ಕಾರ್ಯ ಕ್ಷಮತೆಯನ್ನು ಹೆಚ್ಚಿಸುವಲ್ಲಿ ಬಹಳ ಸಹಕಾರಿಯಾಗಿದೆ.

ಇತರ ಆಡಳಿತ ಸುಧಾರಣೆಗಳು

71. ನನ್ನ ಸರ್ಕಾರವು ಬಹಳ ಕಾಲದಿಂದ ಬಾಕಿಯಿರುವ ನ್ಯಾಯಾಲಯ ಪ್ರಕರಣಗಳು ತ್ವರಿತವಾಗಿ ಏಲೇವಾರಿಯಾಗುವಂತೆ ನೋಡಿಕೊಳ್ಳಲು

ಸರ್ವ ಪ್ರಯತ್ನಗಳನ್ನು ಮಾಡುತ್ತಿದೆ. ವಿವಿಧ ನ್ಯಾಯಾಲಯಗಳಲ್ಲಿ ಪ್ರತಿಹೇಳಿಕೆಗಳನ್ನು ಮತ್ತು ಮೇಲ್ಮನವಿ ಪ್ರಕರಣಗಳನ್ನು ತ್ವರಿತವಾಗಿ ದಾಖಲಿಸುವುದಕ್ಕಾಗಿ ನಿವೃತ್ತ ನ್ಯಾಯಾಧೀಶರನ್ನು ಕರಾರು ಸೇವೆಯ ಆಧಾರದ ಮೇಲೆ ನೇಮಿಸಿಕೊಂಡು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕಾನೂನು ಕೋಶ (ಲೀಗಲ್ ಸೆಲ್) ಗಳನ್ನು ರಚಿಸುವ ಪ್ರಸ್ತಾಪವಿದೆ.

72. ಸ್ಮಾರ್ಟ್‌ಕಾರ್ಡ್‌ಗಳ ಮೂಲಕ ವಾಹನ ಚಾಲನ ಪರವಾನಗಿ (ಡ್ರೈವಿಂಗ್ ಲೈಸೆನ್ಸ್) ಮತ್ತು ಮೋಟಾರು ವಾಹನ ನೋಂದಣಿಯನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ. ಉತ್ತಮ ಸೇವೆಗಳನ್ನು ಒದಗಿಸುವ ದೃಷ್ಟಿಯಿಂದ ಸಾರಿಗೆ ಇಲಾಖೆಯ ಎಲ್ಲಾ ಕಚೇರಿಗಳ ಗಣಕೀಕರಣ ಮಾಡಲಾಗಿದೆ. ಪ್ರಯಾಣಿಕರಿಗೆ ನೀಡುವ ಸಾರಿಗೆ ಸೌಲಭ್ಯಗಳನ್ನು ಸುಧಾರಿಸುವ ದೃಷ್ಟಿಯಿಂದ, 2084 ಹೊಸ ಬಸ್ಸುಗಳನ್ನು ಖರೀದಿಸಲಾಗಿದೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಸಮಾಜದ ಕಡುಬಡವರ್ಗದ ಪ್ರಯಾಣಿಕರಿಗೆ ನೆರವಾಗಲು ರಿಯಾಯಿತಿ ದರಗಳಲ್ಲಿ 25 'ಅಟಲ್ ಸಾರಿಗೆ' ಬಸ್ಸುಗಳನ್ನು ಪ್ರಾರಂಭಿಸಿದೆ.

ವಿತ್ತೀಯ ನಿರ್ವಹಣೆ

73. ಇತ್ತೀಚಿನ ವರ್ಷಗಳಲ್ಲಿ, ಕರ್ನಾಟಕ ರಾಜ್ಯವು ತನ್ನ ವಿತ್ತೀಯ ನಿರ್ವಹಣೆಯಲ್ಲಿ ಶಿಸ್ತುಬದ್ಧ ರಾಜ್ಯವೆಂಬ ಖ್ಯಾತಿಯನ್ನು ಗಳಿಸಿದೆ. ವಿವಿಧ ಯೋಜನೆಗಳ ಮೇಲಿನ ವೆಚ್ಚವು ಹೆಚ್ಚಾಗುತ್ತಿದ್ದರೂ, ನನ್ನ ಸರ್ಕಾರವು, ಪ್ರತಿ ವರ್ಷ ರಾಜಸ್ವ ಹೆಚ್ಚಳವನ್ನು ಸಾಧಿಸುವ ದಾಖಲೆಯನ್ನು ಕಾಪಾಡಿಕೊಂಡು ಬಂದಿದೆ. ರಾಜ್ಯವು, ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದಲ್ಲಿ ನಿರೂಪಿಸಲಾದ ಪರಿಮಿತಿಗಳೊಳಗೆ ತನ್ನ ವಿತ್ತೀಯ ಕೊರತೆಯನ್ನು ಇರಿಸಿಕೊಂಡು ಬಂದಿದೆ. ನನ್ನ ಸರ್ಕಾರವು, ಮುಂಬರುವ ವರ್ಷಗಳಲ್ಲಿ ಕೂಡ ಈ ದಾಖಲೆಯನ್ನು ಉಳಿಸಿಕೊಳ್ಳಲು ನಿಶ್ಚಯಿಸಿದೆ ಮತ್ತು ಬಂಡವಾಳ ಹೂಡಿಕೆಯು ಸುಸ್ಥಿರವಾಗಿ ದೊರಕುವಂತೆ ನೋಡಿಕೊಳ್ಳುತ್ತದೆ.

74. ನನ್ನ ಸರ್ಕಾರವು, ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಎಲ್ಲಾ ಶಾಸಕರ ಸಹಕಾರವನ್ನು ಕೋರುತ್ತದೆ. ಕರ್ನಾಟಕದ ಸಮಗ್ರ ಪ್ರಗತಿ ಮತ್ತು ಅಭಿವೃದ್ಧಿಗೆ ತಾವೆಲ್ಲರೂ ತಮ್ಮ ಬೆಂಬಲವನ್ನು ನೀಡುವಿರೆಂಬ ವಿಶ್ವಾಸ ನನಗಿದೆ. ಈ ಪ್ರಯತ್ನದಲ್ಲಿ ತಮಗೆ ಸರ್ವ ಯಶಸ್ಸು ದೊರಕಲೆಂದು ನಾನು ತಮ್ಮೆಲ್ಲರಿಗೂ ಶುಭ ಕೋರುತ್ತೇನೆ.

ಜೈ ಹಿಂದ್

ಜೈ ಕರ್ನಾಟಕ

ಈಗ ಸದನವನ್ನು ಮುಂದೂಡಿ ಸೋಮವಾರದಂದು ಅಂದರೆ, 1ನೇ ಮಾರ್ಚ್, 2010ರಂದು ಬೆಳಿಗ್ಗೆ 11.00 ಗಂಟೆಗೆ ಸೇರುವುದು.

(ಸದನವು ಮಧ್ಯಾಹ್ನ 1 ಗಂಟೆ 11 ನಿಮಿಷಕ್ಕೆ ಮುಕ್ತಾಯಗೊಂಡು ದಿನಾಂಕ: 1.3.2010ರ ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಃಶ್ಚಯಿಸಿತು)